01-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

2026-27 ರ ಎಸ್. ಎಸ್. ಎಲ್. ಸಿ. ಮಾದರಿ ಪ್ರಶ್ನೆಪತ್ರಿಕೆ 4 ಕ್ಕೆ ಮಾದರಿ ಉತ್ತರಗಳು

2026-27 SSLC MODEL QUESTION PAPRER 4 MODEL ANSWERS

ವಿಷಯ ಸಂಕೇತ : **01-K** **Subject Code : 01-K**

ವಿಷಯ : ಪ್ರಥಮ ಭಾಷೆ — **ಕನ್ನಡ**

Subject : First Language — KANNADA

ಸಮಯ : 3 ಗಂಟೆ 15 ನಿಮಿಷಗಳು] [Time : 3 Hours 15 Minutes

ಗರಿಷ್ಠ ಅಂಕಗಳು : 100] [Max. Marks : 100

[Turn over

I. ಬಹುಆಯ್ಕೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : **6 X 1 = 6**

1. ಕನ್ನಡ ವರ್ಣಮಾಲೆಯಲ್ಲಿರುವ ದೀರ್ಘಸ್ವರಗಳಿವು

(ಎ) ಕಚಟತಪ (ಬಿ) ಅಇಉಎಒ

(ಸಿ) ಆಈಊಏಓ (ಡಿ) ಯರವಷಸ

ಉತ್ತರ : (ಸಿ) ಆಈಊಏಓ

2. ಅನುನಾಸಿಕ ಸಂಧಿಗೆ ಸೇರಿದ ಪದ

(ಎ) ಅತ್ಯಂತ (ಬಿ) ಸನ್ಮಾನ

(ಸಿ) ವಾಗ್ದೇವಿ (ಡಿ) ನೀರ್ವನಿ

ಉತ್ತರ : (ಬಿ) ಸನ್ಮಾನ

3. ಸಿನಿಮಾ ಗೃಹದಲ್ಲಿ ನಿಮ್ಮ ಜಾಗವನ್ನು ಹುಡುಕಿಕೊಡುವವರು ಹೆಣ್ಣು! ಇಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ

(ಎ) ಪೂರ್ಣವಿರಾಮ (ಬಿ) ಪ್ರಶ್ನಾರ್ಥಕ

(ಸಿ) ಅರ್ಧವಿರಾಮ (ಡಿ) ಭಾವಸೂಚಕ

ಉತ್ತರ : (ಡಿ) ಭಾವಸೂಚಕ

4. ನಿಷೇಧಾರ್ಥಕ ಕ್ರಿಯಾರೂಪಕ್ಕೆ ಉದಾಹರಣೆ

(ಎ) ತಿನ್ನಲಿ (ಬಿ) ತಿಂದಾನು

(ಸಿ) ತಿನ್ನನು (ಡಿ) ತಿಂದನು

ಉತ್ತರ : (ಸಿ) ತಿನ್ನನು

5. ಹಳಗನ್ನಡ ಸಪ್ತಮೀ ವಿಭಕ್ತಿಯ ಪ್ರತ್ಯಯ

(ಎ) ಅತ್ತಣಿಂ (ಬಿ) ಒಳ್

(ಸಿ) ಇಂ (ಡಿ) ಅಂ

ಉತ್ತರ : (ಬಿ) ಒಳ್

6. ಅಂಶಿಸಮಾಸಕ್ಕೆ ಸೇರಿದ ಪದವಿದು

(ಎ) ಮುಕ್ಕಣ್ಣ (ಬಿ) ಪಾರ್ಥಭೀಮರು

(ಸಿ) ಹಿಂದಲೆ (ಡಿ) ಬೆಟ್ಟದಾವರೆ

ಉತ್ತರ : (ಸಿ) ಹಿಂದಲೆ

II. ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) : **4 X 1 = 4**

7. ಕೋಕಿಲಾ : ಕೋಗಿಲೆ : : ವಂಧ್ಯಾ : ..... .

ಉತ್ತರ : ಬಂಜೆ

8. ಸಹದೇವ : ಅಂಕಿತನಾಮ : : ನದಿ : ..... .

ಉತ್ತರ : ರೂಢನಾಮ

9. ಧಗಧಗ : ಅನುಕರಣಾವ್ಯಯ : : ಅದುವೇ : ..... .

ಉತ್ತರ : ಅವಧಾರಣಾರ್ಥಕಾವ್ಯಯ

10. ಬಾಳುವ : ಕೃದಂತನಾಮ : : ಬಾಳುವಿಕೆ : ..... .

ಉತ್ತರ : ಕೃದಂತ ಭಾವನಾಮ

III. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ 1 ಅಂಕ) : **7 X 1 = 7**

11. ಭಾಷೆ ಯಾವುದಕ್ಕೆ ಸಾಧನವಾಗಿದೆ?

ಉತ್ತರ : ನಮ್ಮ ಸುತ್ತಮುತ್ತಲಿನವರೊಡನೆ ವ್ಯವಹರಿಸುವುದಕ್ಕೆ ಹಾಗೂ ವಿಚಾರ ವಿನಿಮಯ ಮಾಡುವುದಕ್ಕೆ ಭಾಷೆ ಒಂದು ಅಮೂಲ್ಯ ಸಾಧನವಾಗಿದೆ.

12. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?

ಉತ್ತರ : ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿಪುಸ್ತಕ.

13. ಲೇಖಕರು ವರ್ಣಿಸಿದ ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರೇನು?

ಉತ್ತರ : ಲೇಖಕರು ವರ್ಣಿಸಿದ ಲಂಡನ್ ನಗರದ ಸ್ಟೇಷನರಿ ಅಂಗಡಿಯ ಹೆಸರು 'ವೂಲವರ್ಥ್'.

14. ಪಂಡಿತರಾದ ಅಗ್ನಿಭೂತಿ ವಾಯುಭೂತಿಯರಿಗೆ ದೊರೆತ ಪದವಿ ಯಾವುದು?

ಉತ್ತರ : ಪಂಡಿತರಾದ ಅಗ್ನಿಭೂತಿ ವಾಯುಭೂತಿಯರಿಗೆ ಮಂತ್ರಿ ಪದವಿ ದೊರೆಯಿತು.

15. ಹೆಬಲಕ್ ಸಾಹೇಬನನ್ನು ಗುಂಡಿಕ್ಕಿ ಕೊಂದವರು ಯಾರು?

ಉತ್ತರ : ಹೆಬಲಕ್(ಹೆನ್ರಿ ಹ್ಯಾವಲಾಕ್) ಸಾಹೇಬನನ್ನು ಜಡಗನು ಗುಂಡಿಕ್ಕಿ ಕೊಂದನು.

16. ದ್ರುಪದನು ಎಲ್ಲಿ ರಾಜ್ಯಭಾರ ಮಾಡುತ್ತಿದ್ದನು?

ಉತ್ತರ : ದ್ರುಪದನು ಛತ್ರಾವತಿಯಲ್ಲಿ ರಾಜ್ಯಭಾರ ಮಾಡುತ್ತಿದ್ದನು.

17. ಇಳೆಯು ಹೇಗೆ ಸಂಭ್ರಮಿಸುತ್ತಿದೆ?

ಉತ್ತರ : ಇಳೆಯು ಕಡಲುಕ್ಕಿ ಹರಿಯುವಂತೆ ಸಂಭ್ರಮಿಸುತ್ತಿದೆ.

IV. ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ 2 ಅಂಕಗಳು) :

10 X 2 = 20

18. ಲಿಪಿಯ ಮೂಲಕ ಜ್ಞಾನ ಭಂಡಾರ ಯಾವ ರೀತಿ ಭದ್ರವಾಯಿತು?

ಉತ್ತರ : ಮಾನವನಿಗೆ ಬಿಡುವು ಹೆಚ್ಚಿದಂತೆ, ಜೀವನದ ಸೌಕರ್ಯಗಳನ್ನು ವಿಶಿಷ್ಟ ಮೇಧಾಶಕ್ತಿಯಿಂದ ಅಭಿವೃದ್ಧಿಗೊಳಿಸುತ್ತಾ, ತನ್ನ ಆಗುಹೋಗುಗಳನ್ನು, ಸುಖದುಃಖಗಳನ್ನು ಕಾವ್ಯರೂಪಕ್ಕೆ ಇಳಿಸುವ ಮಾರ್ಗವನ್ನು ಕಂಡುಕೊಂಡ. ಮೂಲ ಲಿಪಿಯನ್ನು ಮತ್ತಷ್ಟು ಪರಿಷ್ಕರಿಸುತ್ತಾ ಸುಂದರವಾದ ಸಾಹಿತ್ಯ ಕೃತಿಗಳನ್ನು ಬರೆದಿಡುವುದನ್ನು ಮಾನವ ಕಲಿತುಕೊಂಡ. ಹೀಗೆ ಸಾಹಿತ್ಯ ವಿವಿಧ ರೂಪದಲ್ಲಿ ಬೆಳೆದಿರಬೇಕು. ಲಿಪಿಯ ಮೂಲಕ ಪರಂಪರೆಯಿಂದ ಬಂದ ಎಷ್ಟೋ ವಿಷಯಗಳನ್ನು ಬರೆದಿಡಲು ಸಾಧ್ಯವಾಯಿತು. ಹೀಗೆ ಜ್ಞಾನ ಭಂಡಾರ ಭದ್ರವಾಯಿತು.

19. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಹೊಸರೂಪ ಪಡೆದ ಪ್ರಜಾಪ್ರತಿನಿಧಿ ಸಭೆಯನ್ನು ಕುರಿತು ಬರೆಯಿರಿ.

ಉತ್ತರ : ನಾಲ್ವಡಿ ಕೃಷ್ಣರಾಜ ಒಡೆಯರು ೧೯೨೩ರಲ್ಲಿ ಹೊಸ ಕಾನೂನೊಂದನ್ನು ಜಾರಿಗೆ ತಂದು, ಪ್ರಜಾಪ್ರತಿನಿಧಿ ಸಭೆಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ಇದು ಪ್ರಜಾತಂತ್ರದ ದೃಷ್ಟಿಯಿಂದ ಭಾರತದಲ್ಲಿಯೇ ಮಾದರಿಯಾದ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಲು ಆರಂಭಿಸಿತು. ಪ್ರಜಾ ಪ್ರತಿನಿಧಿ ಸಭೆಯು ವರ್ಷಕ್ಕೆ ಎರಡು ಬಾರಿ ಸಮಾವೇಶಗೊಂಡು ಕಲಾಪಗಳನ್ನು ನಡೆಸುತ್ತಿತ್ತು. ಅಲ್ಲಿ ವಾರ್ಷಿಕ ಆಯವ್ಯಯ ಪರಿಶೀಲನೆ, ಪ್ರಶ್ನೋತ್ತರಗಳು, ಠರಾವುಗಳನ್ನು ಮಂಡಿಸುವುದು ಮುಂತಾದ ಸಂಸದೀಯ ಮಾದರಿಯ ನಡೆವಳಿಕೆಗಳು ನಡೆಯುತ್ತಿದ್ದವು. ಪ್ರತಿನಿಧಿ ಸಭೆಯಲ್ಲಿದ್ದ ೨೭೫ ಸದಸ್ಯರಲ್ಲಿ ಹೆಚ್ಚು ಪ್ರತಿನಿಧಿಗಳು ಜನರಿಂದ ಆಯ್ಕೆಯಾದವರಾಗಿದ್ದರು. ಒಟ್ಟಾರೆ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 'ಪ್ರಜಾಪ್ರತಿನಿಧಿ ಸಭೆ'ಯು ನೂತನ ರೂಪವನ್ನು ಪಡೆದು, ನಿಜವಾದ ಜನ ಪ್ರತಿನಿಧಿ ಸಭೆಯಾಗಿ ಪರಿವರ್ತನೆಯಾಯಿತು.

20. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?

ಉತ್ತರ : ಲಂಡನ್ನಿನ ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಉಪಾಹಾರ ಗೃಹಗಳಲ್ಲಿ ಮತ್ತು ಯಾವುದಾದರೂ ದೊಡ್ಡ ಅಂಗಡಿಗೆ ಹೋದರೆ ಅಲ್ಲಿಯ ಟೈಪಿಸ್ಟ್ ಕಾರಕೂನ ಕೂಡ ಒಬ್ಬ ಹೆಣ್ಣು ಮಗಳು. ಸಿನಿಮಾ ಗೃಹದಲ್ಲಿ ನಮ್ಮ ಜಾಗವನ್ನು ಹುಡುಕಿಕೊಡುವ ಕಾರ್ಯ ನಿರ್ವಹಿಸುವವರು ಹೆಣ್ಣು ಮಕ್ಕಳು. ಕಾಲೇಜಿನಲ್ಲಿ ಸಹ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರನ್ನು ಇಟ್ಟಿದ್ದಾರೆ.

21. ಸೂರ್ಯಮಿತ್ರನು ಮಾವನೆಂದು ತಿಳಿದಾಗ ವಾಯುಭೂತಿಯ ಪ್ರತಿಕ್ರಿಯೆ ಹೇಗಿತ್ತು?

ಉತ್ತರ : ಕಿರಿಯವನಾದ ವಾಯುಭೂತಿ ತನ್ನ ಸೋದರಮಾವ ಸೂರ್ಯಮಿತ್ರನು ತಮಗೆ ಮಾಡಿದ್ದೆಲ್ಲವು ಅನ್ಯಾಯವೆಂದು ಬಗೆದನು. ನಾವು ಭಿಕ್ಷೆ ಎತಿ ತಂದ ಕೂಳಿಗೆ ತುಸು ಎಣ್ಣೆಯನ್ನಾಗಲಿ, ಮಜ್ಜಿಗೆಯನ್ನಾಗಲಿ ನಮ್ಮ ಮಾವ ಕೊಡಿಸಲಿಲ್ಲ. ಕೆರೆಗೆ ನಾವು ಮೀಯಲು ಹೋದಾಗಲೂ ಎಣ್ಣೆಯ ವಾಸನೆಯನ್ನೂ ನೋಡಿಸಲಿಲ್ಲ. ಆಗಾಗ ನೆಂಟರಿಷ್ಟರನ್ನೂ ಕರೆಸಿ ನಮ್ಮ ಕಣ್ಣೆದುರೆ ದಿವ್ಯಾಹಾರವನ್ನು ಉಣ್ಣುತ್ತಿದ್ದನು. ಆಳುಗಳಿಗೂ ಔತಣದೂಟವಾಗುತ್ತಿದ್ದಿತು. ಯಾವ ಹಬ್ಬದಲ್ಲೂ ನಮಗೆ ಒಳ್ಳೆಯ ಊಟ ಬಡಿಸಲಿಲ್ಲ. ಪಂಚಮಹಾಪಾತಕನೇ ಸರಿ. ಏಳೆಂಟು ವರ್ಷ ನಮ್ಮನ್ನು ಶತ್ರುಗಳಂತೆ ನಡೆಸಿಕೊಂಡನು ಎಂದು ತನ್ನ ಮನಸ್ಸಿನಲ್ಲಿ ವಾಯುಭೂತಿಯು ಸೂರ್ಯಮಿತ್ರನ ಬಗೆಗೆ ಕ್ರೋಧವನ್ನು ತುಂಬಿಕೊಂಡನು.

22. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?

ಉತ್ತರ : ಕಾಲವೆಂಬ ಹಕ್ಕಿಯು ಆಕಾಶ, ಮೋಡ, ಭೂಮಂಡಲಗಳ ಎಲ್ಲಾ ಬಣ್ಣಗಳನ್ನು ಸಮನಾಗಿ ಆವರಿಸಿಕೊಂಡಿದೆ. ಆಕಾಶದಲ್ಲಿರುವ ಮುಗಿಲಿಗೆ ರೆಕ್ಕೆಗಳೊಡೆದವೋ ಎಂಬಂತೆ, ಆಕಾಶದಲ್ಲಿ ಮಿನುಗುತ್ತಿರುವ ಚಿಕ್ಕೆಗಳ ಮಾಲೆಯನ್ನು ಕೊರಳಿಗೆ ಸಿಕ್ಕಿಸಿಕೊಂಡು, ಅಕಾಶದಲ್ಲಿ ಬೆಳಗುತ್ತಿರುವ ಸೂರ್ಯಚಂದ್ರರನ್ನು ಕಣ್ಣುಗಳಾಗಿ ಮಾಡಿಕೊಂಡು ಅನಂತದೆಡೆಗೆ ಹಾರಿ ಹೋಗುತ್ತಿದೆ ಎಂದು ಕವಿ ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೋಲಿಸಿದ್ದಾರೆ.

23. ಹಲಗಲಿಗೆ ದಂಡು ಬರಲು ಕಾರಣವೇನು?

ಉತ್ತರ : ಹಲಗಲಿಯ ಬೇಡರಾದ ಪೂಜೇರಿ ಹನುಮ, ಬ್ಯಾಡರ ಬಾಲ, ರಾಮ, ಜಡಗ ಇವರು ಬ್ರಿಟಿಷ್ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದರು. ಈ ಆದೇಶವನ್ನು ತಂದ ಕಾರಕೂನನ ಕಪಾಳಕ್ಕೆ ಹೊಡೆದು ಸಿಪಾಯಿಯನ್ನು ಹೊಡೆದುರುಳಿಸಿದರು. ಇದರಿಂದ ಕೋಪಗೊಂಡ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಯ ಬೇಡರ ದಂಗೆಯನ್ನು ಬಗ್ಗುಬಡಿಯಲು ದಂಡನ್ನು ಕರೆಯಿಸಿದರು.

24. ಜಲಿಯನ್ ವಾಲಾಬಾಗ್ ಮಣ್ಣನ್ನು ಕುರಿತು ಭಗತ್‌ಸಿಂಗ್ ತನ್ನ ತಂಗಿಗೆ ಹೇಳಿದ ಮಾತುಗಳಾವುವು?

ಉತ್ತರ : ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ನ ಮಣ್ಣಿನ ಕುರಿತು ತನ್ನ ತಂಗಿಗೆ ಇದು ಬಹಳ ಪೂಜ್ಯನೀಯವಾದ ಮಣ್ಣು, ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಹುತಾತ್ಮರಾದವರ ರಕ್ತದಿಂದ ಈ ಮಣ್ಣು ಒದ್ದೆಯಾಗಿದೆ ಎಂದು ಹೇಳುತ್ತಾನೆ. ನಂತರ ಪವಿತ್ರವಾದ ಮಣ್ಣಿನ ಡಬ್ಬವನ್ನು ಮನೆಯ ಸ್ವಚ್ಛ ಜಾಗದಲ್ಲಿರಿಸಿ ಹೂಗಳನ್ನು ಇರಿಸಿ ನಮಸ್ಕರಿಸಿ ಪೂಜಿಸತೊಡಗಿದನು.

25. ರಾಜಕೀಯ ಸ್ವಾತಂತ್ರ್ಯದ ಮಹತ್ತ್ವವನ್ನು ತಿಳಿಸಿ.

ಉತ್ತರ : ರಾಜಕೀಯ ಸ್ವಾತಂತ್ರ್ಯ ಇರುವುದು ವ್ಯಕ್ತಿಗೆ ಶಾಸನಗಳನ್ನು ರಚಿಸುವುದರಲ್ಲಿ, ಸರಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ಪಾಲು ಇರುವ ಹಕ್ಕಿನಲ್ಲಿ. ಸರ್ಕಾರ ಇರುವುದೇ ಜನರಿಗೆ ಜೀವನ, ಸ್ವಾತಂತ್ರ್ಯ, ಸಂತೋಷಾನ್ವೇಷಣೆಗಳನ್ನು ಒದಗಿಸಿ ಕೊಡುವ ಸಲುವಾಗಿ. ವಾಸ್ತವವಾಗಿ ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆ ತತ್ವದಿಂದ ಅನುಗಮನ ಮಾಡಿದ ತತ್ತ್ವವಾಗಿದೆ. ಏಕೆಂದರೆ ರಾಜಕೀಯವಾದ ಸಮಸ್ತ ಅಧಿಕಾರವೂ ಜನತೆಯಿಂದ ಬರುತ್ತದೆ. ತಮ್ಮ ಸಾರ್ವಜನಿಕವಾದ ಹಾಗೂ ಖಾಸಗಿಯಾದ ಜೀವನವನ್ನು ನಿರ್ದೇಶಿಸುವ, ನಿಯಂತ್ರಿಸುವ ಸಾಮರ್ಥ್ಯವನ್ನು ಅವರು ತಾವೇ ಹೊಂದಿರುತ್ತಾರೆಯೇ ಹೊರತು ಬೇರೆ ಯಾರು ಅಲ್ಲವೆಂದು ಅರ್ಥವಾಗುತ್ತದೆ.

26. ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ಹೇಗೆ ವ್ಯಕ್ತಗೊಂಡಿದೆ?

ಉತ್ತರ : ಚಂದನವನ್ನು ಕಡಿದು,ಕೊರೆದು, ತೇದರೂ ನೊಂದು ಅದು ತನ್ನ ಸುವಾಸನೆ ಬಿಡುವುದಿಲ್ಲ. ಸುವರ್ಣವನ್ನು ಕಡಿದು, ಅರೆದು, ಬೇಯಿಸಿದರೂ ಕಳಂಕ ಹೊಂದುವುದಿಲ್ಲ. ಕಬ್ಬನ್ನು ಸಂದು ಸಂದು ಕಡಿದು ಗಾಣದಲ್ಲಿಟ್ಟು ಅರೆದು ಪಾಕ ಮಾಡಿ, ಅದು ಸಕ್ಕರೆಯಾದ ಮೇಲೆ ತಾನು ನೊಂದಿದ್ದ ಕಾರಣ ಸಿಹಿ ಬಿಡುವುದಿಲ್ಲ. ಹಾಗೆಯೇ ನನ್ನ ಹೀನತೆ ತಿಳಿಸಿ ಕೊಂದರೂ ನಾನು ನಿನ್ನಲ್ಲಿ ಶರಣಾಗುವುದನ್ನು ಬಿಡುವುದಿಲ್ಲ ಎಂದು ಭಗವಂತನಲ್ಲಿ ಶರಣಾಗುವ ಭಾವ ಅಕ್ಕಮಹಾದೇವಿಯ ವಚನದಲ್ಲಿ ವ್ಯಕ್ತವಾಗಿದೆ.

27. ಪ್ರಾಸವನ್ನು ಬಿಟ್ಟು ಬರೆಯಬೇಕೆಂದು ನಿರ್ಧರಿಸಿದ ಪೈಗಳು ಪ್ರಾಸವನ್ನು ಇಟ್ಟೇ ಬರೆಯಲು ಕಾರಣವೇನು?

ಉತ್ತರ : ಪೈಗಳಿಗೆ ಪ್ರಾಸವನ್ನು ಬಿಟ್ಟು ಬರೆಯಬೇಕೆಂದು ಪದೇ ಪದೇ ಸ್ಫುರಿಸುತ್ತಿತ್ತು. ಆದರೆ ಚೇಳಿನ ಮಂತ್ರ ಬಾರದೆ ಹಾವಿನ ಗುದ್ದಿನಲ್ಲಿ ಕೈಹಾಕಲಾರದೆ, ಆ ಬಗ್ಗೆ ಬಲ್ಲವರು ಬೆನ್ನು ತಟ್ಟಿದಲ್ಲದೆ ಹಾಗೆ ಬರೆಯಲಿಕ್ಕೆ ಮನಸ್ಸು ಅಳುಕುತ್ತಿತ್ತು. ಕೈ ತೋರಿಸಿ ಅವಲಕ್ಷಣ ಎನಿಸಿಕೊಳ್ಳುವುದಕ್ಕಿಂತ ಸುಮ್ಮನಿರುವುದು ಒಳ್ಳೆಯದು ಎನಿಸುತ್ತಿತ್ತು. ತಮ್ಮ ಕವಿತೆಯನ್ನು ಕುರಿತು ಯಾರೊಂದಿಗೂ ಕೇಳಬಾರದು, ಯಾರು ಏನೆಂದರೂ ಮಾಡುವುದನ್ನು ಬಿಡಬಾರದು, ಉತ್ತ ಮೇಲಲ್ಲವೆ ಬಿತ್ತುವ ಯೋಚನೆ? ತಕ್ಕಷ್ಟು ಬರೆದ ಮೇಲಲ್ಲವೇ ಪ್ರಾಸದ ಗೋಜು? ಆ ತನಕ ತಣ್ಣಗಿರುವುದೇ ಲೇಸೆಂದು ಪ್ರಾಸ ಇಟ್ಟೇ ಬರೆಯುತ್ತ ಹೋದರು.

V. ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು : 2 X 3 = 6

28. ಸಾರಾ ಅಬೂಬಕ್ಕರ್

ಉತ್ತರ : **ಸಾರಾ ಅಬೂಬಕ್ಕರ್ :** ಸಾರಾ ಅಬೂಬಕ್ಕರ್ ಅವರು ೧೯೩೬ರಂದು ಕಾಸರಗೋಡಿನಲ್ಲಿ ಜನಿಸಿದರು. ಇವರು 'ಚಪ್ಪಲಿಗಳು, ಖಿಡ್ಡಾ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಪಯಣ, ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ' ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ನೃಪತುಂಗ ಪ್ರಶಸ್ತಿ' ಲಭಿಸಿದೆ.

29. ಪಂಪ

ಉತ್ತರ : **ಪಂಪ :** ಆದಿಕವಿ ಪಂಪನು ಸಾ. ಶ. ೯೦೨ರಂದು ವೆಂಗಿಮಂಡಲದ ವೆಂಗಿಪಳು ಎಂಬ ಅಗ್ರಹಾರದಲ್ಲಿ ಜನಿಸಿದನು. ಇವನು 'ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯಂ(ಪಂಪ ಭಾರತ)' ಎಂಬ ಪ್ರಮುಖ ಕೃತಿಗಳನ್ನು ರಚಿಸಿದ್ದಾನೆ. ಈತನಿಗೆ 'ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾಗುಣಾರ್ಣವ' ಎಂಬ ಬಿರುದುಗಳು ಇವೆ.

VI. ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು : 1 X 3 = 3

30. ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ

ಉತ್ತರ :

ಸ	ಭ	ರ	ನ	ಮ	ಯ	ಲ.ಗು.
U U–	–UU	U – U	U UU	– – –	U – –	U –
ಕೆಲವಂ	ಬಲ್ಲವ	ರಿಂದಕ	ಲ್ತುಕೆಲ	ವಂಶಾಸ್ತ್ರಂ	ಗಳಂಕೇ	ಳುತಂ

ಛಂದಸ್ಸು : ಇದು ಅಕ್ಷರಗಣ ಆಧಾರಿತ 'ಮತ್ತೇಭವಿಕ್ರೀಡಿತವೃತ್ತ'ದ ಲಕ್ಷ್ಯವಾಗಿದೆ.

VII. ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯ ಮಾಡುವುದು : **1 X 3 = 3**

31. "ಸೀತೆಯ ಮುಖ ಕಮಲವೋ ಎಂಬಂತೆ ಅರಳಿತು"

ಉತ್ತರ : ಅಲಂಕಾರ : ಉತ್ಪ್ರೇಕ್ಷಾಲಂಕಾರ

ಲಕ್ಷಣ : ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು ಉತ್ಪ್ರೇಕ್ಷಾಲಂಕಾರ.

ಸಮನ್ವಯ : ಉಪಮೇಯ : ಸೀತೆಯ ಮುಖ

ಉಪಮಾನ : ಕಮಲ

ಇಲ್ಲಿ ಉಪಮೇಯವಾದ 'ಸೀತೆಯ ಮುಖವನ್ನು' ಉಪಮಾನವಾದ 'ಕಮಲ' ಎಂಬುದಾಗಿ ಸಂಭಾವಿಸಿ (ಕಲ್ಪಿಸಿ) ವರ್ಣಿಸಲಾಗಿದೆ. ಆದ್ದರಿಂದ ಇದು 'ಉತ್ಪ್ರೇಕ್ಷಾಲಂಕಾರ'ದ ಲಕ್ಷ್ಯವಾಗಿದೆ.

VIII. ಗಾದೆಯನ್ನು ವಿಸ್ತರಿಸಿ ಬರೆಯುವುದು : **1 X 3 = 3**

32. ತಾಳಿದವನು ಬಾಳಿಯಾನು.

ಅಥವಾ

ಆರೋಗ್ಯವೇ ಭಾಗ್ಯ.

ಉತ್ತರ : **ತಾಳಿದವನು ಬಾಳಿಯಾನು :** ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆ ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿದೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಗಾದೆಗಳು ಬದುಕಿಗೆ ಮಾರ್ಗದರ್ಶನ ನೀಡಿ ಬದುಕನ್ನು ಹಸನುಗೊಳಿಸುತ್ತವೆ. ಜೀವನದಲ್ಲಿ ತಾಳ್ಮೆಯು ಅತ್ಯವಶ್ಯಕ ಎಂಬುದನ್ನು ಪ್ರಸ್ತುತ ಗಾದೆಯು ವಿವರಿಸುತ್ತದೆ.

ಜೀವನದಲ್ಲಿ ಏಳು ಬೀಳುಗಳು, ಕಷ್ಟ ಕಾರ್ಪಣ್ಯ, ಸುಖ ದುಃಖ, ದುಗುಡ ದುಮ್ಮಾನ, ಕೋಪ ತಾಪಗಳು ಸಹಜ. ಎಂತಹ ಸಂದರ್ಭದಲ್ಲೂ ವಿವೇಕವನ್ನು ಕಳೆದುಕೊಳ್ಳಬಾರದು ತಾಳ್ಮೆಯಿಂದಿರಬೇಕು. "ತಾಳುವಿಕೆಗಿಂತ ತಪವು ಇಲ್ಲ" ಎಂದಿದ್ದಾರೆ ಕನಕದಾಸರು. ಗಿಡ ನೆಟ್ಟ ಕೂಡಲೆ ಫಸಲು ಬಿಡಬೇಕು ಎಂದರೆ ಸಾಧ್ಯವಿಲ್ಲ. ಸಂಗೀತಾಭ್ಯಾಸ ಮಾಡಿ ಒಂದೇ ತಿಂಗಳಿನಲ್ಲಿ ಕಛೇರಿ ನೀಡಲು ಸಾಧ್ಯವಿಲ್ಲ. ಪ್ರತಿಯೊಂದು ಸಾಧನೆಯಲ್ಲೂ ತಾಳ್ಮೆ ಬೇಕು.

ತಾಳ್ಮೆಗೆ ಕಾಯುವ ಗುಣ ಬೇಕು. "ಆತುರಗಾರನಿಗೆ ಬುದ್ಧಿ ಕೆಳಮಟ್ಟ" ಜೀವನದಲ್ಲಿ ಸುಖ, ಶಾಂತಿ, ಸಮೃದ್ಧಿಯನ್ನು ಪಡೆಯಬೇಕೆಂದರೆ ಕಾಯಬೇಕು. ತಾಳ್ಮೆ ಎಂದರೆ ಕೇವಲ ಕಾಯುವಿಕೆಯಲ್ಲ. ಕಾಯುವಿಕೆಯ ಪ್ರಕ್ರಿಯೆಯಲ್ಲಿ ನಾವು ತೋರುವ ಉತ್ತಮ ನಡೆವಳಿಕೆ. ತಾಳ್ಮೆಗೆ ಬಂಗಾರಕ್ಕಿಂತ ಹೆಚ್ಚಿನ ಬೆಲೆಯಿದೆ. ಒಂದು ಕ್ಷಣದ ತಾಳ್ಮೆಯು ಸಾವಿರ ಕ್ಷಣಕ್ಕಾಗುವಷ್ಟು ದುಃಖವನ್ನು ತಡೆಯಬಲ್ಲದು. ತಾಳ್ಮೆಯಿಂದ ಕಟ್ಟಿದ್ದು ಮತ್ತು ಪಡೆದಿದ್ದು ದೀರ್ಘಕಾಲ ಬಾಳುತ್ತದೆ. ಶ್ರುತಿಬದ್ಧ ಹಾಡುಗಾರಿಕೆಗೆ ಹಾಗೂ ನೃತ್ಯಕ್ಕೆ ತಾಳವೆಷ್ಟು ಮುಖ್ಯವೋ ಬದುಕಿಗೆ ತಾಳ್ಮೆಯೂ ಅಷ್ಟೇ ಮುಖ್ಯವೆಂಬುದನ್ನು ಪ್ರಸ್ತುತ ಗಾದೆಯು ಅರ್ಥೈಸುತ್ತದೆ.

ಉತ್ತರ : **ಆರೋಗ್ಯವೇ ಭಾಗ್ಯ :** ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆ ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಾಗಿದೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಗಾದೆಯ ಮಹತ್ತ್ವವನ್ನು ಬಹು ಸುಂದರವಾಗಿ ಅರ್ಥೈಸುತ್ತದೆ. ಜಗತ್ತಿನಲ್ಲಿ ನೂರಾರು ತರಹದ ಭಾಗ್ಯಗಳು, ಸಂಪತ್ತುಗಳು ಇರಬಹುದು. ಆದರೆ ಅವೆಲ್ಲದಕ್ಕಿಂತ ಮಿಗಿಲಾದ, ಶ್ರೇಷ್ಠವಾದ ಭಾಗ್ಯ ಎಂದರೆ ಅದು 'ಆರೋಗ್ಯ ಭಾಗ್ಯ'. ಈ ಗಾದೆ ಮಾತು ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ ಆರೋಗ್ಯದ ಪ್ರಾಮುಖ್ಯತೆಯನ್ನು ಅತ್ಯಂತ ಸರಳವಾಗಿ ಮತ್ತು ಪರಿಣಾಮಕಾರಿಯಾಗಿ ತಿಳಿಸಿಕೊಡುತ್ತದೆ.

ಇಂದಿನ ಆಧುನಿಕ ಯುಗದಲ್ಲಿ ಮನುಷ್ಯನು ಹಗಲಿರುಳು ಕಷ್ಟಪಟ್ಟು ಹಣ ಗಳಿಸುವುದೇ ಜೀವನದ ಪರಮ ಗುರಿ ಎಂದು ಭಾವಿಸಿದ್ದಾನೆ. ಆದರೆ ಈ ಧಾವಂತದಲ್ಲಿ ಆತ ತನ್ನ ಸ್ವಂತ ಆರೋಗ್ಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಿದ್ದಾನೆ. ಹಣದಿಂದ ನಾವು ಹಾಸಿಗೆಯನ್ನು ಕೊಳ್ಳಬಹುದು ನಿದ್ದೆಯನ್ನಲ್ಲ, ಆಹಾರವನ್ನು ಕೊಳ್ಳಬಹುದು ಹಸಿವನ್ನಲ್ಲ, ಔಷಧಿಯನ್ನು ಕೊಳ್ಳಬಹುದು ಆರೋಗ್ಯವನ್ನಲ್ಲ. ವಿಶ್ವ ಆರೋಗ್ಯ ಸಂಸ್ಥೆಯ (WHO) ಪ್ರಕಾರ, ದೈಹಿಕವಾಗಿ, ಮಾನಸಿಕವಾಗಿ ಮತ್ತು ಸಾಮಾಜಿಕವಾಗಿ ಸದೃಢವಾಗಿರುವುದೇ ನಿಜವಾದ ಆರೋಗ್ಯ. ಆರೋಗ್ಯವಂತ ದೇಹದಲ್ಲಿ ಮಾತ್ರ ಆರೋಗ್ಯವಂತ ಮನಸ್ಸು ಇರಲು ಸಾಧ್ಯ. ಮನುಷ್ಯನಿಗೆ ದೈಹಿಕ ಶಕ್ತಿ ಎಷ್ಟು ಮುಖ್ಯವೋ, ಮಾನಸಿಕ ನೆಮ್ಮದಿಯೂ ಅಷ್ಟೇ ಮುಖ್ಯ. ಆರೋಗ್ಯವಂತ ವ್ಯಕ್ತಿಯು ಸದಾ ಉತ್ಸಾಹದಿಂದ ಇರುತ್ತಾನೆ. ಆತನ ಕಾರ್ಯಕ್ಷಮತೆ ಹೆಚ್ಚಿರುತ್ತದೆ, ಆರೋಗ್ಯವನ್ನು ಕಾಪಾಡಿಕೊಳ್ಳಲು ನಾವು ಸಮತೋಲಿತ ಆಹಾರ, ನಿಯಮಿತ ವ್ಯಾಯಾಮ, ಸಾಕಷ್ಟು ನಿದ್ರೆ ಮತ್ತು ವಿಶ್ರಾಂತಿ, ದುಶ್ಚಟಗಳಿಂದ ದೂರವಿರುವುದು, ಶುಚಿತ್ವ ಹೀಗೆ ಕೆಲವು ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಅನಾರೋಗ್ಯವು ಕೇವಲ ಒಬ್ಬ ವ್ಯಕ್ತಿಯನ್ನು ಮಾತ್ರವಲ್ಲದೆ, ಆತನ ಇಡೀ ಕುಟುಂಬವನ್ನು ಆರ್ಥಿಕವಾಗಿ ಮತ್ತು ಮಾನಸಿಕವಾಗಿ ಕುಗ್ಗಿಸುತ್ತದೆ. "ಆರೋಗ್ಯವಂತ ಸಮಾಜವೇ ದೇಶದ ನಿಜವಾದ ಆಸ್ತಿ". ನಿರೋಗಿ ಜೀವನವೇ ನಿಜವಾದ ಸೌಭಾಗ್ಯ ಎಂಬುದನ್ನು ಅರಿತು, ಇಂದಿನಿಂದಲೇ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕೆಂಬುದು ಈ ಗಾದೆ ಮಾತಿನ ತಾತ್ಪರ್ಯವಾಗಿದೆ.

IX. ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು : **6 X 3 = 18**

33. "ನಾನು ಮುಖ ಮೇಲಾಗಿ ಬಿದ್ದಿದ್ದೆನೆ?"

ಉತ್ತರ :

ಆಯ್ಕೆ : ಪ್ರಸ್ತುತ ವಾಕ್ಯವನ್ನು ಎ. ಎನ್. ಮೂರ್ತಿರಾವ್ ಅವರು ಬರೆದ 'ಸಮಗ್ರ ಲಲಿತ ಪ್ರಬಂಧಗಳು' ಎಂಬ ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಶಾನುಭೋಗರು ಪ್ರಜ್ಞೆತಪ್ಪಿ ಬಿದ್ದಿದ್ದಾಗ ಅದೇ ದಾರಿಯಲ್ಲಿ ಗಾಡಿಯಲ್ಲಿ ಹೋಗುತ್ತಿದ್ದ ರೈತರು ಅವರ ಮುಖದ ಮೇಲೆ ನೀರೆರಚಿ ಎಚ್ಚರಿಸಿದ ಸಂದರ್ಭದಲ್ಲಿ ಅವರ ಮನಸ್ಸನ್ನೆಲ್ಲಾ ವಿಸ್ಮಯ ಆವರಿಸಿತ್ತು. ತಾವು ಉಳಿದದ್ದು ಹೇಗೆ? ನಿಸ್ಸಹಾಯರಾಗಿ ಪ್ರಜ್ಞೆಯಿಲ್ಲದೆ ಬಿದ್ದಿದ್ದಾಗ ಹುಲಿ ತಮ್ಮನ್ನು ಎಳೆದುಕೊಂಡು ಹೋಗಲಿಲ್ಲವೇಕೆ? ಎಂದು ಸ್ವಲ್ಪ ಹೊತ್ತು ಯೋಚಿಸಿದ ಶಾನುಭೋಗರು ಗಾಡಿಯವರನ್ನು ಮೇಲಿನಂತೆ ಕೇಳಿದ ಸಂದರ್ಭವಾಗಿದೆ.

ಸ್ವಾರಸ್ಯ : 'ಬೀಸೋ ದೊಣ್ಣೆಯಿಂದ ತಪ್ಪಿಸಿ ಕೊಂಡರೆ ಸಾವಿರ ವರ್ಷ ಆಯಸ್ಸು' ಎಂಬಂತೆ ಸಾವಿನ ದವಡೆಯಿಂದ ಪಾರಾಗಿ ಬಂದಾಗ ಆಗುವ ವಿಸ್ಮಯ, ನಿಟ್ಟುಸಿರು, ತನ್ನ ಕುಲ ಧರ್ಮವನ್ನು ಪಾಲಿಸಿಕೊಂಡು ಬಂದ ಹುಲಿಯ ಬಗೆಗಿನ ಮೆಚ್ಚುಗೆ ಇಲ್ಲಿ ಸ್ವಾರಸ್ಯ ಪೂರ್ಣವಾಗಿ ಮೂಡಿ ಬಂದಿದೆ.

34. "ಗಾಂಧೀಜಿ ಅವರು ಮೈಸೂರಿನ ಆಡಳಿತ ರೀತಿಯನ್ನು ಮುಕ್ತಕಂಠದಿಂದ ಹೊಗಳಿದರು."

ಉತ್ತರ :

ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಿ. ಎಸ್. ಜಯಪ್ಪಗೌಡ ಅವರು ಬರೆದ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಕೃತಿಯಿಂದ ಆಯ್ದ 'ಭಾಗ್ಯಶಿಲ್ಪಿಗಳು' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ನಾಲ್ವಡಿ ಕೃಷ್ಣರಾಜ ಒಡೆಯರ ಮತ್ತು ವಿಶ್ವೇಶ್ವರಯ್ಯನವರ ದೂರದೃಷ್ಟಿಯ ಯೋಜನೆಗಳು, ಸಾಮಾಜಿಕ ಸುಧಾರಣೆಗಳು ಹಾಗೂ ಪ್ರಜಾ ಹಿತಚಿಂತನೆಯ ಆಡಳಿತ ವೈಖರಿ, ದಕ್ಷತೆ, ಪ್ರಾಮಾಣಿಕತೆಯನ್ನು ಕಣ್ಣಾರೆ ಕಂಡ ಮಹಾತ್ಮಾ ಗಾಂಧೀಜಿಯವರು ಮೈಸೂರು ರಾಜ್ಯವನ್ನು 'ರಾಮರಾಜ್ಯ' ಎಂದು ಕರೆಯುತ್ತಾ, ಮಹಾರಾಜರ ಆಡಳಿತವನ್ನು ಮತ್ತು ಸರ್ ಎಂ. ವಿಶ್ವೇಶ್ವರಯ್ಯನವರ ಅದ್ಭುತ ಕಾರ್ಯದಕ್ಷತೆ, ದೇಶಪ್ರೇಮ ಮತ್ತು ಶ್ರಮಜೀವನವನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದರು ಎಂಬುದನ್ನು ಲೇಖಕರು ಮೈಸೂರು ಸಂಸ್ಥಾನದ ಸರ್ವತೋಮುಖ ಪ್ರಗತಿಯನ್ನು ವಿವರಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ : ರಾಮರಾಜ್ಯದ ಕನಸ್ಸು ಕಾಣುತ್ತಿದ್ದ ಗಾಂಧೀಜಿಯವರಿಗೆ ಮೈಸೂರು ಸಂಸ್ಥಾನ ರಾಮರಾಜ್ಯದಂತೆ ಕಂಡಿರಬಹುದು, ಶ್ರೇಷ್ಠ ಆಡಳಿತಗಾರಿಕೆ ಮತ್ತು ಜನಪರ ಕಾಳಜಿ ಮಹಾರಾಜರು ಹಾಗೂ ವಿಶ್ವೇಶ್ವರಯ್ಯನವರ ವ್ಯಕ್ತಿತ್ವ, ಕಠಿಣ ಪರಿಶ್ರಮ, ತಾಂತ್ರಿಕ ದಕ್ಷತೆ, ಅಭಿವೃದ್ಧಿಗಾಗಿಯೇ ಜೀವನವನ್ನು ಮುಡಿಪಾಗಿರಿಸಿದ ಗುಣಧರ್ಮ ಇಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

35. "ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು"

ಉತ್ತರ :

ಆಯ್ಕೆ : ಪ್ರಸ್ತುತ ವಾಕ್ಯವನ್ನು ದೇವನೂರ ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಕೃತಿಯಿಂದ ಆಯ್ದ 'ಎದೆಗೆ ಬಿದ್ದ ಅಕ್ಷರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ವಚನಕಾರರ ದೃಷ್ಟಿಯಲ್ಲಿ ಅರಿವು ಅಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ; ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ, ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು ಎಂದು ಲೇಖಕರು ವಿಶ್ಲೇಷಿಸುವಾಗ ಫ. ಗು. ಹಳಕಟ್ಟಿಯವರ 'ಶಿವಾನುಭವ ಶಬ್ದಕೋಶ' ದಲ್ಲಿ ಉಲ್ಲೇಖವಾದ ಮಾತನ್ನು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ನಡೆಯೆಂದರೆ ವ್ಯಕ್ತಿಯ ವರ್ತನೆ. ವರ್ತನೆಯಿಂದ ಬಂದ ಮಾತು ಅನುಭವದ ಫಲ. ಅಂದರೆ ಅನುಭವದಿಂದ ಬಂದ ತಿಳಿವಳಿಕೆಯೇ ಅರಿವು. ಕೇವಲ ಮಾತನಾಡದೆ ಮಾತನಾಡಿದಂತೆ ನಡೆದು ತೋರಿಸಬೇಕು. ಅದೇ ಅರಿವು ಎಂಬುದು ಸ್ವಾರಸ್ಯಕರವಾಗಿ ಮೂಡಿಬಂದಿದೆ.

36. "ಬಲ್ಲರು ಯಾರಾ ಹಾಕಿದ ಹೊಂಚ"

ಉತ್ತರ :

ಆಯ್ಕೆ : ಪ್ರಸ್ತುತ ಸಾಲನ್ನು ದ. ರಾ. ಬೇಂದ್ರೆಯವರು ಬರೆದ 'ಗರಿ' ಕೃತಿಯಿಂದ ಆಯ್ದ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಕವಿ ದ. ರಾ. ಬೇಂದ್ರೆಯವರು ಚಲನಶೀಲವಾದ ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುತ್ತ, ವಿಶ್ವದ ಅನಂತ ದಿಕ್ಕುಗಳ ಅಂಚನ್ನು ಕಾಲದ ಪಕ್ಷಿಯು ಮುಟ್ಟಿದೆ. ಅಲ್ಲದೆ ಈ ಅನಂತತೆಯ ಆಚೆಯು ಕಾಲಪಕ್ಷಿಯ ಮನೋಗತವನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯವಾದುದು ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಸೃಷ್ಟಿಯ ರಹಸ್ಯವನ್ನು ಭೇದಿಸಲು ಸೃಷ್ಟಿಕರ್ತ ಬ್ರಹ್ಮನ ಬ್ರಹ್ಮಾಂಡವನ್ನೇ ಒಡೆಯುವ ಸಂಚು ಹಾಗೂ ಹೊಸ ಸೃಷ್ಟಿಯ ನಿರ್ಮಾಣದ ಬೆರಗು, ಕಾಲಪಕ್ಷಿಯ ತಂತ್ರ, ಯೋಜನೆ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

37. "ಅಹಿತರೊಳ್ ಸಂಧಿಯನೇಂ ಸಮಕೊಳಿಸಲೆಂದು ಬಂದೆನೆ"

ಉತ್ತರ :

ಆಯ್ಕೆ : ಪ್ರಸ್ತುತ ಸಾಲನ್ನು ರನ್ನನು ಬರೆದ 'ಸಾಹಸ ಭೀಮ ವಿಜಯಂ' ಕೃತಿಯಿಂದ ಆಯ್ದ 'ಛಲಮನೆ ಮೆಱೆವೆಂ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಕುರುಕ್ಷೇತ್ರ ಯುದ್ಧದದಲ್ಲಿ ತನ್ನವರೆಲ್ಲರನ್ನು ಕಳೆದುಕೊಂಡ ದುರ್ಯೋಧನ ತಂದೆತಾಯಿಯರ ಸಲಹೆಯಂತೆ ಶರಶಯ್ಯೆಯ ಮೇಲಿದ್ದ ಭೀಷ್ಮಾಚಾರ್ಯರ ಆಶೀರ್ವಾದವನ್ನು ಪಡೆಯಲು ರಣರಂಗಕ್ಕೆ ಬರುತ್ತಾನೆ. ಭೀಷ್ಮರು ದುರ್ಯೋಧನನಿಗೆ "ಇನ್ನಾದರೂ ಪಾಂಡವರೊಂದಿಗೆ ಸಂಧಿಯನ್ನು ಮಾಡಿಕೊ" ಎಂದು ಸಲಹೆ ನೀಡುತ್ತಾರೆ. ಆಗ ಭೀಷ್ಮರ ಮಾತಿಗೆ ಪ್ರತಿಯಾಗಿ ಅತ್ಯಂತ ಆವೇಶ ಮತ್ತು ಸ್ವಾಭಿಮಾನದಿಂದ ದುರ್ಯೋಧನನು ನಾನು ಪಾಂಡವರೊಂದಿಗೆ ಸಂಧಿ ಮಾಡಿಕೊಳ್ಳಲು ಇಲ್ಲಿಗೆ ಬಂದಿಲ್ಲ ಎಂದು ಈ ಮೇಲಿನ ಮಾತನ್ನು ಹೇಳುತ್ತಾನೆ.

ಸ್ವಾರಸ್ಯ : ಇಲ್ಲಿ ದುರ್ಯೋಧನನ ಅಪ್ರತಿಮ ಛಲ, ಸ್ವಾಭಿಮಾನ, ವೀರತ್ವ ಮತ್ತು ಸೋಲುವ ಹಂತದಲ್ಲೂ ಶತ್ರುಗಳಿಗೆ ತಲೆಬಾಗದ ಅವನ ಹಠದ ಗುಣ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

38. "ಗಿಳಿಯೆದೆಬಣ್ಣದನೋಟ"

ಉತ್ತರ :

ಆಯ್ಕೆ : ಪ್ರಸ್ತುತ ಸಾಲನ್ನು ಕುವೆಂಪುರವರು ಬರೆದ 'ಪಕ್ಷಿಕಾಶಿ' ಕೃತಿಯಿಂದ ಆಯ್ದ 'ಹಸುರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಪ್ರೇರಿತರಾದ ಕವಿ ಕುವೆಂಪು ಅವರಿಗೆ ಮಲೆನಾಡಿನ ಕುಪ್ಪಳ್ಳಿಯ 'ಕವಿಶೈಲ'ದಲ್ಲಿನ ಕಾಡಿನಂಚಿನಲ್ಲಿದ್ದ ಫಲಭರಿತ ಅಡಕೆಯ ತೋಟ, ಹುಲ್ಲಿನ ಹಾಸುಗಳು ಹೊಸಪಚ್ಚೆಯ ಜಮಖಾನೆ ಪಸರಿಸಿದಂತೆ, ಭತ್ತದ ಗದ್ದೆಯ ಗಿಳಿಯ ಹಸುರು ಬಣ್ಣದ ನೋಟ ಸುಂದರವಾಗಿ ಕಾಣುತ್ತಿತ್ತು ಎಂದು ಕವಿ ಭೂಮಿಯ ಹಸುರಿನಿಂದ ಮೈಮುಚ್ಚಿರುವ ಬಗೆಯನ್ನು ವರ್ಣಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಹಸುರಿನ ವಿವಿಧ ರೂಪಗಳನ್ನು ಗಿಳಿಯೆದೆ, ಪೊಸಪಚ್ಚೆ, ಜಮಖಾನೆ ಮೊದಲಾದ ರೂಪಕಗಳ ಮೂಲಕ ಚಿತ್ರಿಸಿ ಕವಿ ಪ್ರಕೃತಿಯ ಆರಾಧನೆ ಆನಂದದ ಸಾಧನ ಎಂಬುದನ್ನು ಮನವರಿಕೆ ಮಾಡಿರುವ ರೀತಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

X. ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ) : 1 X 4 = 4

39. ಕೊರಳ ಸೆರೆ ಹಿಗ್ಗಿದವು ದೃಗುಜಲ

.....

.....

.....

.....

ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

ಅಥವಾ

ಮಾರಿಗೌತಣವಾಯ್ತು ನಾಳಿನ

.....

.....

.....

.....

ವೀರರೈವರ ನೋಯಿಸೆನು ರಾಜೀವಸಖನಾಣೆ

ಉತ್ತರ : ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

ಅಥವಾ

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ

XI. ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು : 1 X 4 = 4

40. ಸುತ್ತಲು ಕವಿಯುವ ಕತ್ತಲೆಯೊಳಗೆ
ಪ್ರೀತಿಯ ಹಣತೆಯ ಹಚ್ಚೋಣ
ಬಿರುಗಾಳಿಗೆ ಹೊಯ್ದಾಡುವ ಹಡಗನು
ಎಚ್ಚರದಲಿ ಮುನ್ನಡೆಸೋಣ

ಉತ್ತರ : ಹೋಗಬೇಕಾದ ದಾರಿ ತಲುಪಬೇಕಾದ ಗುರಿ ಸ್ಪಷ್ಟವಾಗಿದ್ದರೆ ಅರ್ಧ ಯಶಸ್ಸನ್ನು ಪಡೆದಂತೆ. ದೃಢಸಂಕಲ್ಪದಿಂದ ಧನಾತ್ಮಕ ಭಾವನೆ, ಸಂಕಲ್ಪದತ್ತ ದೃಢನಿರ್ಧಾರದಿಂದ ಕಾರ್ಯಶೀಲರಾದರೆ ಅಸಾಧ್ಯವಾದುದು ಯಾವುದೂ ಇಲ್ಲ ಎಂಬುದನ್ನು ಕವಿ ಜಿ. ಎಸ್. ಶಿವರುದ್ರಪ್ಪನವರು 'ಸಂಕಲ್ಪಗೀತೆ' ಎಂಬ ಪದ್ಯಪಾಠದಲ್ಲಿ ಅರ್ಥಪೂರ್ಣವಾಗಿ ಅಭಿವ್ಯಕ್ತಿಸಿದ್ದಾರೆ.

ಇಂದು ಜಗತ್ತಿನಲ್ಲಿ ಜಾತಿ, ಮತ, ಭಾಷೆ, ಬಣ್ಣ, ಅಜ್ಞಾನ, ಮೂಢನಂಬಿಕೆಗಳೆಂಬ ವಿಚಾರಗಳಿಂದ ಜನರ ಸುತ್ತಲೂ ದ್ವೇಷದ ಕತ್ತಲೆಯು ಕವಿದಿದೆ. ಈ ಕತ್ತಲೆಯನ್ನು ಹೊಡೆದೊಡಿಸಲು ಬೆಳಕಿನ ಅಗತ್ಯತೆ ಇದೆ. ಅಂತೆಯೇ ನಾವು ಈ ದ್ವೇಷದ ಕತ್ತಲೆ ಹೊಡೆದೊಡಿಸಲು ಪ್ರೀತಿಯ ದೀಪವನ್ನು ಹಚ್ಚಬೇಕಿದೆ. ಆಗ ಮಾತ್ರ ಸ್ವಾಸ್ಥ್ಯ ಹಾಗೂ ದ್ವೇಷರಹಿತ ಸಮಾಜ ನಿರ್ಮಾಣವಾಗುತ್ತದೆ. ಇಂದು ಸಂಸಾರವೆಂಬ ಹಡಗು ಅಜ್ಞಾನದ ಬಿರುಗಾಳಿಗೆ ಸಿಲುಕಿಹಾಕಿಕೊಂಡು ಹೊಯ್ದಾಡುತ್ತ ಎತ್ತೆತ್ತಲೋ ಸಾಗುತ್ತಿದೆ. ಆದ್ದರಿಂದ ನಾವು ಬಾಳನೌಕೆಯನ್ನು ಬಹು ಎಚ್ಚರಿಕೆಯಿಂದ ಗುರಿಯತ್ತ ಮುನ್ನಡೆಸಬೇಕು ಜೀವನದಲ್ಲಿ ಯಾವುದೇ ಸವಾಲುಗಳಿಗೆ ಅಂಜದೆ ಧೈರ್ಯದಿಂದ ನಾವು ನಮ್ಮ ಬದುಕು ಮುನ್ನಡೆಸಬೇಕು ಎಂದು ಕವಿ ಜಿ. ಎಸ್. ಶಿವರುದ್ರಪ್ಪ ಅವರು ಆಶಿಸುತ್ತಾರೆ.

ಜೀವನದಲ್ಲಿ ಧನಾತ್ಮಕ ಭಾವನೆಯನ್ನು ಹೊಂದಿರಬೇಕು. ಯಾವುದೇ ಸವಾಲುಗಳು ಎದುರಾದಾಗಲೂ ಆತ್ಮ ವಿಶ್ವಾಸದಿಂದ ಎದುರಿಸಬೇಕು. ಭೇದಭಾವಗಳನ್ನು ಹೋಗಲಾಡಿಸಿ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ನಮ್ಮನ್ನು ಆವರಿಸಿರುವ ಅಸಮಾನತೆ, ದ್ವೇಷ ದೂರವಾಗುತ್ತದೆ. ಎಲ್ಲರೂ ಪ್ರೀತಿಯಿಂದ, ಬಹು ಎಚ್ಚರಿಕೆಯಿಂದ ಬದುಕನ್ನು ಸಾಗಿಸಬೇಕು. ಇದು ಸ್ವಾಸ್ಥ್ಯಯುತ ಸಮಾಜ ನಿರ್ಮಾಣಕ್ಕೆ ಎಡೆ ಮಾಡುತ್ತದೆ ಎಂಬ ಮೌಲ್ಯಯುತ ಸಂದೇಶ ಪ್ರಸ್ತುತ ಪದ್ಯಭಾಗದಲ್ಲಿ ಅಡಕವಾಗಿದೆ.

XII. ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು : 2 X 4 = 8

41. 'ತಾಳಿದವನು ಬಾಳಿಯಾನು' ಎಂಬ ಮಾತು ಶಬರಿಯ ಪಾಲಿಗೆ ನಿಜವಾದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಅಥವಾ

ಮತಂಗಾಶ್ರಮದ ಬಳಿ ರಾಮಲಕ್ಷ್ಮಣರು ಸೀತೆಯನ್ನು ನೆನೆದು ದುಃಖಿಸಿದ ಪರಿ ಹಾಗೂ ಪರಸ್ಪರರು ಸಮಾಧಾನ ಪಡಿಸಿಕೊಂಡ ಬಗೆಯನ್ನು ಬರೆಯಿರಿ.

ಉತ್ತರ : **"ತಾಳುವಿಕೆಗಿಂತ ತಪವು ಇಲ್ಲ"** ಎಂದಿದ್ದಾರೆ ಕನಕದಾಸರು. ತಾಳ್ಮೆಗೆ ಕಾಯುವ ಗುಣ ಬೇಕು. ಶಬರಿಯು ಮತಂಗ ಋಷಿಯ ಆಶ್ರಮದಲ್ಲಿದ್ದ ತಪಸ್ವಿನಿ. ಶಬರಿ ಮತಂಗ ಋಷಿಯ ಪ್ರಿಯ ಶಿಷ್ಯೆ. ಸಿದ್ಧರಾದ ಮತಂಗ ಋಷಿಗಳು ತಮ್ಮ ಅಂತ್ಯಕಾಲದಲ್ಲಿ ಶಬರಿಯ ಮೇಲೆ ಕರುಣೆಯನ್ನು ತೋರಿ ರಾಮಲಕ್ಷ್ಮಣರು ಈ ಆಶ್ರಮಕ್ಕೆ ಬರುತ್ತಾರೆ. ನಿನಗೆ ರಾಮಲಕ್ಷ್ಮಣರ ದರ್ಶನದಿಂದ ಒಳ್ಳೆಯದಾಗುತ್ತದೆ. ನಿನ್ನಿಷ್ಟಾರ್ಥ ನೆರವೇರುತ್ತದೆ ಎಂದು ಹೇಳಿದ್ದರು. ಗುರುಗಳ ಈ ಮಾತನ್ನು ನಂಬಿದ ಶಬರಿಯು ಶ್ರೀರಾಮನ ಆಗಮನಕ್ಕಾಗಿ ಪ್ರತಿನಿತ್ಯ ಕಾಯುತ್ತಿದ್ದಳು. ತಾಳ್ಮೆ ಎಂದರೆ ಕೇವಲ ಕಾಯುವಿಕೆಯಲ್ಲ. ಕಾಯುವಿಕೆಯ ಪ್ರಕ್ರಿಯೆಯಲ್ಲಿ ನಾವು ತೋರುವ ಉತ್ತಮ ನಡೆವಳಿಕೆ. ಶಬರಿಯು ಗುರುಗಳ ಮಾತಿನ ಮೇಲೆ ಇಟ್ಟ ನಂಬಿಕೆ ಹಾಗೂ ಶ್ರೀರಾಮನಿಗಾಗಿ ಹಂಬಲಿಸುತ್ತ ಕಾಯುತ್ತಿದ್ದ ಅವಳ ತಾಳ್ಮೆಯು ಹುಸಿಯಾಗಲಿಲ್ಲ. ಮತಂಗ ಋಷಿಗಳು ಶಬರಿಗೆ ಹೇಳಿದ ಮಾತಿನಂತೆ ರಾಮಲಕ್ಷಣರು ಶಬರಿಯ ಆಶ್ರಮಕ್ಕೆ ಭೇಟಿ ನೀಡುತ್ತಾರೆ. ಶಬರಿಯು ಶ್ರೀರಾಮನ ದರ್ಶನದಿಂದ ಪುಳಕಿತಳಾಗುತ್ತಾಳೆ. ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಯನ್ನು ಕಣ್ಣಿಗೆ ಒತ್ತಿಕೊಳ್ಳುತ್ತಾಳೆ. ಅಯ್ಯೋ, ಇಂದು ಏನೂ ಸಿದ್ಧತೆಯಿಲ್ಲ; ನಿನ್ನೆಯಷ್ಟು ಚೆನ್ನವಿಲ್ಲ ಎಂದು ಹಂಬಲಿಸಿ, ತನ್ನ ಮನದ ಬಯಕೆಯಂತೆ ಬಗೆ ಬಗೆಯ

ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ, ಅಬ್ಬಾ ಎಂದು ಹಿಗ್ಗಿಹಿಗ್ಗಿ ಸಂತಸ ಪಡುತ್ತಾಳೆ. ನಂತರ ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ. ನಿಮಗೆಂದು ತಂದೆನೆಂದು ಎಂದು ಹೇಳುತ್ತ ತಾನೇ ಅವರ ಕೈಯಲ್ಲಿ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸುತ್ತಾಳೆ. ಶಬರಿಯು ಶ್ರೀರಾಮನಲ್ಲಿ ತನಗೆ ಮುಕ್ತಿಯನ್ನು ನೀಡುವಂತೆ ಬೇಡಿಕೊಂಡು ವೇದಿಯಲ್ಲಿದ್ದ ಅಗ್ನಿಯನ್ನು ಪ್ರವೇಶಿಸಿ ಮುಕ್ತಿಯನ್ನು ಪಡೆಯುತ್ತಾಳೆ. ಮುನಿಗಳ ಮಾತನ್ನು ನಂಬಿ ಹಲವಾರು ವರ್ಷಗಳಿಂದ ರಾಮನ ದರ್ಶನಕ್ಕಾಗಿ ಸಹನೆಯಿಂದ ಕಾಯುತ್ತ, ಶ್ರೀರಾಮನು ತನ್ನ ಬಳಿಗೆ ಬರುವ ಸುದಿನವನ್ನು ಎದುರು ನೋಡುತ್ತಿದ್ದ ಶಬರಿಗೆ ರಾಮನ ದರ್ಶನವಾಗುತ್ತದೆ. ಶಬರಿಯ ಮನದಾಸೆ ಈಡೇರುತ್ತದೆ. ಹೀಗೆ 'ತಾಳಿದವನು ಬಾಳಿಯಾನು' ಎಂಬ ಮಾತು ಶಬರಿಯ ಪಾಲಿಗೆ ನಿಜವಾಗಿದೆ.

ಅಥವಾ

ಉತ್ತರ : ಶ್ರೀರಾಮನ ಗುಣ ಸ್ವಭಾವದ ಸೆಳೆತಕ್ಕೆ ಸಿಲುಕಿ, ಆತನನ್ನು ಕಾಣುವುದೇ ಜೀವನದ ಏಕೈಕ ಗುರಿ ಎಂದು ಭಾವಿಸಿದ್ದ ಶಬರಿ ಮತಂಗಾಶ್ರಮದಲ್ಲಿ ವಾಸವಾಗಿದ್ದಳು. ಮತಂಗರು ದಿವ್ಯಲೋಕವನ್ನು ಸೇರಿದ ಬಳಿಕ ರಾಮಧ್ಯಾನದಲ್ಲಿ ನಿರತಳಾಗಿ ರಾಮನ ದರ್ಶನಕ್ಕಾಗಿ ಹಗಲಿರುಳು ಕಾಯುತ್ತಿದ್ದಳು. ಇತ್ತ ಸೀತಾಪಹರಣದಿಂದ ದುಃಖಿತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಅರಸುತ್ತ ಕಾಡಿನಲ್ಲಿ ಅಲೆದಾಡುತ್ತಿದ್ದರು. ಎಲ್ಲಿಯೂ ಸೀತೆಯ ಸುಳಿವು ಸಿಗದೇ ಇದ್ದಾಗ ರಾಮ ಗಿರಿವನಗಳನ್ನು ಕುರಿತು ಭೂಮಿಜಾತೆ, ಆತ್ಮಕಾಮ ಕಲ್ಪಲತೆಯಾದ ಸೀತೆ ನನಗೆ ದೊರೆಯುವುದಿಲ್ಲವೆ? ಅವಳ ನೆಲೆ ತಿಳಿದಿಲ್ಲವೆ? ಈ ಶೋಕದ ಬೇಗೆ ನನ್ನನ್ನು ಸುಡುತ್ತಿದೆ ಎಂದು ದುಃಖಿಸುತ್ತಾನೆ. ಆಗ ಲಕ್ಷ್ಮಣ ಅಣ್ಣನನ್ನು ಕುರಿತು, ಸೂರ್ಯನೇ ತೇಜಸ್ಸನ್ನು ಕಳೆದುಕೊಂಡರೆ ಅಖಿಲ ಲೋಕಕ್ಕೆ ತೇಜಸ್ಸನ್ನು ನೀಡುವವರು ಯಾರು? ನೀನೇ ಧೈರ್ಯವನ್ನು ಕಳೆದುಕೊಂಡರೆ ಧೈರ್ಯ ನೀಡುವವರು ಯಾರು? ತಾಳ್ಮೆ ಕಳೆದುಕೊಳ್ಳಬೇಡ ಎಂದು ಸಂತೈಸುತ್ತಾನೆ. ಸೀತೆಯ ನೆನಪಿನ ಸೆಳೆತಕ್ಕೆ ನನ್ನ ಆತ್ಮ ಸಿಲುಕಿದೆ. ಈ ಶೋಕ ನನಗೆ ಅನಿವಾರ್ಯವಾಗಿದೆ. ಅಗೋ ನೋಡು ಲಕ್ಷ್ಮಣ ಋಷಿಗಳ ಆಶ್ರಮ. ಇದನ್ನು ನೋಡಿದಾಗಲೆಲ್ಲ ಸೀತೆಯ ನೆನಪಾಗುತ್ತದೆ ಎಂದು ರಾಮ ಹೇಳುತ್ತಾನೆ. ಹೌದು ಅಣ್ಣ, ಚಿತ್ರಕೂಟದಲ್ಲಿ ಅತ್ತಿಗೆಯೊಂದಿಗೆ ಕಳೆದ ದಿನಗಳು ನೆನಪಾಗುತ್ತಿವೆ. ನಾನೇ ಪಾಪಿ. ಆಕೆಯನ್ನು ಒಂಟಿಯಾಗಿ ಬಿಟ್ಟೆ. ನನ್ನ ಅಹಂಕಾರಕ್ಕೆ ಮನ್ನಣೆ ಕೊಟ್ಟೆ ಎಂದಾಗ, ಮರುಗಬೇಡ ಲಕ್ಷ್ಮಣ ಆದದ್ದು ಆಯಿತು. ನಿಮ್ಮನ್ನು ಆ ದೇವರೇ ಹೀಗೆ ಮರಳು ಮಾಡಿತ್ತು. ಅದಿರಲಿ ನಾವೀಗ ದನು ಸೂಚಿಸಿದ ದಾರಿಯಲ್ಲಿ ಬಂದಿದ್ದೇವೆಯೇ? ಇದು ಶಬರಿಯ ಆಶ್ರಮ ಇರಬಹುದೆ? ಯಾವುದೋ ಹುಚ್ಚಿ ನಮ್ಮೆಡೆಗೆ ಬರುತ್ತಿದ್ದಂತಿದೆ. ಯಾರಿರಬಹುದು ಎಂದು ರಾಮ ಹೇಳಿದಾಗ ಲಕ್ಷ್ಮಣ ಮರೆಯಲ್ಲಿ ನಿಂತು ಪರೀಕ್ಷಿಸೋಣ. ಆಗ ಯಾರೆಂದು ತಿಳಿಯುತ್ತದೆ ಎಂದು ಇಬ್ಬರೂ ಮರೆಯಲ್ಲಿ ನಿಂತು ಆಕೆಯನ್ನು ಗಮನಿಸುತ್ತಾರೆ. ಆಕೆಯೇ ಶಬರಿ ಎಂದು ತಿಳಿಯುತ್ತದೆ. ಹೀಗೆ ಪರಸ್ಪರರು ಸಮಾಧಾನ ಮಾಡಿಕೊಂಡು ರಾಮ ಲಕ್ಷ್ಮಣರಿಬ್ಬರು ಶಬರಿಯ ಆಶ್ರಮಕ್ಕೆ ಬಂದು ಶಬರಿಯನ್ನು ದರ್ಶಿಸುತ್ತಾರೆ.

42. ಲವನ ಬಾಲಸಹಜ ಸಾಹಸ ಪ್ರವೃತ್ತಿ 'ವೀರಲವ' ಪದ್ಯದಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿ.

ಅಥವಾ

ಲವನು ದಿಟ್ಟತನದಿಂದ ಕುದುರೆಯನ್ನು ಕಟ್ಟಿಹಾಕಿ ವೀರತನದಿಂದ ಯುದ್ಧಕ್ಕೆ ಸಿದ್ಧನಾದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಉತ್ತರ : ಬಾಲಕನಾದ ಲವನಲ್ಲಿದ್ದ ಕ್ಷತ್ರಿಯ ಸಹಜವಾದ ವರ್ತನೆ, ಧೈರ್ಯ, ಸಾಹಸ ಪ್ರವೃತ್ತಿ, ಯಾವುದೇ ಕಾರ್ಯದಲ್ಲಿ ಎದೆಗುಂದದೆ ಮುನ್ನುಗ್ಗುವ ನಾಯಕತ್ವದ ಗುಣಗಳನ್ನು ಸಹಜ ಸುಂದರವಾಗಿ ಲಕ್ಷ್ಮೀಶ ಕವಿ ವರ್ಣಿಸಿದ್ದಾನೆ. ವಾಲ್ಮೀಕಿ ಮುನಿಗಳು ತನಗೆ ಉದ್ಯಾನವನದ ರಕ್ಷಣೆಯ ಜವಾಬ್ದಾರಿಯನ್ನು ಕೊಟ್ಟಿರುವುದರಿಂದ ಬಾಲಕ ಲವ ಅದರ ಆರೈಕೆಯನ್ನು ನಿಷ್ಠೆಯಿಂದ ಮಾಡುತ್ತಿದ್ದನು. ಶ್ರೀರಾಮನ ಯಾಗದ ಕುದುರೆ ಬಂದು ಉದ್ಯಾನವನದ ಹೂಗಿಡಗಳನ್ನು ನುಗ್ಗು ನುರಿಯಾಗುವಂತೆ ತುಳಿಯುತ್ತಿರುವುದನ್ನು ಕಂಡು ಆತನಿಗೆ ಕೋಪ ತಡೆಯಲಾಗಲಿಲ್ಲ. ಯಾವುದೀ ಕುದುರೆ ನಮ್ಮ ಉದ್ಯಾನವನಕ್ಕೆ ಬಂದಿದೆಯಲ್ಲಾ ಎಂದು ಆತ ಅದರ ಹತ್ತಿರ ಹೋಗುತ್ತಾನೆ. ಅದರ ಹಣೆಯ ಪಟ್ಟಿಯಲ್ಲಿದ್ದ ಲೇಖನ ಆತನ ಕ್ಷಾತ್ರರಕ್ತ ಮತ್ತಷ್ಟು ಕುದಿಯುವಂತೆ ಮಾಡುತ್ತದೆ. ಕೌಸಲ್ಯಾ ಪುತ್ರನಾದ ರಾಮನೊಬ್ಬನೇ ವೀರನಂತೆ ಜಾನಕಿಯ ಮಗನಾದ ನಾನು ವೀರನಲ್ಲವೇ? ಎನ್ನುವಲ್ಲಿ ಕ್ಷತ್ರಿಯ ಪುತ್ರಿ ಜಾನಕಿಯ ಮಗನಾದ ಲವನಲ್ಲಿರುವ ಕ್ಷಾತ್ರ ತೇಜಸ್ಸು ಹೊಮ್ಮಿ ರಾಮನ ಗರ್ವವನ್ನು ಬಿಡಿಸದಿದ್ದರೆ ನನಗೆ ಇರುವ ತೋಳುಗಳು ಏತಕ್ಕೆಂದು ವೀರಾವೇಷದಿಂದ ಕುದುರೆಯನ್ನು ಕಟ್ಟಿಹಾಕಲು ಮುಂದಾಗುತ್ತಾನೆ. ಶಾಂತಿಪ್ರಿಯರಾದ ಮುನಿಕುಮಾರರು ಬೇಡ ಅರಸರ ಕುದುರೆ ಎಂದು ಭಯಭೀತರಾದರೆ, ಮುನಿಸುತರ ಮಕ್ಕಳು ಹೆದರಿದರೆ ಜಾನಕಿಯ ಮಗನಿದಕೆ ಬೆದರುವನೇ? ಎಂದು ತನ್ನಲ್ಲಿ ರಕ್ತಗತವಾಗಿ ಬಂದಿರುವ ಧೈರ್ಯ, ಶೌರ್ಯ ಬಾಲಸಹಜ ಸಾಹಸ ಪ್ರವೃತ್ತಿಯನ್ನು ಮೆರೆಯುತ್ತಾನೆ. ಹೀಗೆ ಲವನ ಕ್ಷಾತ್ರಗುಣ ಪದ್ಯದುದ್ದಕ್ಕೂ ಅರ್ಥಪೂರ್ಣವಾಗಿ ಮೂಡಿಬಂದಿದೆ.

ಅಥವಾ

ಉತ್ತರ : ರಾಮನ ಅಶ್ವಮೇಧಯಾಗದ ಕುದುರೆ ದೇಶದೇಶಗಳಲ್ಲಿ ಸಂಚರಿಸುತ್ತದೆ. ಶ್ರೀರಾಮನ ಯಾಗದ ಕುದುರೆ ಎಂದು ತಿಳಿದು ರಾಜ ಮಹಾರಾಜರುಗಳು ಅದನ್ನು ಕಟ್ಟಿ ಹಾಕದೆ ನಮಸ್ಕರಿಸಿ ಕಳುಹಿಸುತ್ತಾರೆ. ಹೀಗೆ ಭೂಮಂಡಲದಲ್ಲೆಲ್ಲಾ ಸಂಚರಿಸುತ್ತಾ ಬಂದ ಕುದುರೆ ವಾಲ್ಮೀಕಿ ಆಶ್ರಮದ ಉಪವನದ ಹುಲ್ಲನ್ನು ಕಂಡು ಆಕರ್ಷಿತವಾಗಿ ತಿನ್ನಲು ಬಯಸಿ ಉದ್ಯಾನವನ್ನು ಪ್ರವೇಶಿಸಿತು. ಅಲ್ಲಿದ್ದ ಹೂವಿನ ಗಿಡಗಳನ್ನು ಚೆನ್ನಾಗಿ ತುಳಿದು ಹುಲ್ಲನ್ನು ತಿನ್ನಲಾರಂಭಿಸಿತು. ಉದ್ಯಾನವನದ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಲವನು ಕುದುರೆಯನ್ನು ಕಟ್ಟಿಹಾಕಲು ಬಂದಾಗ ಅದರ ಹಣೆಯಲ್ಲಿದ್ದ ಲೇಖನವನ್ನು ಓದುತ್ತಾನೆ. "ಈ ಭೂಮಿಯಲ್ಲಿ ಕೌಸಲ್ಯೆಯ ಮಗ ರಾಮನೊಬ್ಬನೇ ವೀರನು. ಅವನ ಯಾಗದ ಕುದುರೆಯಿದು. ಇದನ್ನು ಕಟ್ಟಿಹಾಕುವ ವೀರರು ಯಾರಾದರೂ ಇದ್ದರೆ ಕಟ್ಟಿಹಾಕಬಹುದು." ಈ ಮಾತುಗಳಿಂದ ಲವನು ಕೋಪಗೊಳ್ಳುತ್ತಾನೆ. ಕೌಸಲ್ಯೆಯ ಮಗ ರಾಮನು ಮಾತ್ರ ವೀರನೇ? ಜಾನಕಿಯ ಮಗನಾದ ನಾನು ವೀರನಲ್ಲವೇ? ತಾನೀಗ ಕುದುರೆಯನ್ನು ಕಟ್ಟಿಹಾಕದಿದ್ದರೆ ಲೋಕದ ಜನರು ತನ್ನ ಮಾತೆಯಾದ ಜಾನಕಿಯನ್ನು ಬಂಜೆಯೆನ್ನದೆ ಇರುವರೇ? ಎಂದು ತನ್ನ ಉತ್ತರೀಯದಿಂದ ಆ ಕುದುರೆಯನ್ನು ಬಾಳೆಗಿಡಕ್ಕೆ ಕಟ್ಟಿಹಾಕಲು ಮುಂದಾಗುತ್ತಾನೆ. ಆಗ ಅಲ್ಲಿದ್ದ ತಪಸ್ವಿ ಪುತ್ರರು ಅದು ಅರಸನ ಕುದುರೆ ಅದನ್ನು ಕಟ್ಟಿಹಾಕಿದರೆ ನಮ್ಮನ್ನು ಹೊಡೆಯುವರು ಎಂದು ಬಾಲಸಹಜ ಭಯದಿಂದ ಹೇಳಿದಾಗ, "ಋಷಿಯ ಮಕ್ಕಳಾದ ನೀವು ಅಂಜಿದರೆ ಕ್ಷತ್ರಿಯ ಕುಲಜನಾದ ನಾನು ಹೆದರುವುದೇ?" ಎಂದು ಆ ಕುದುರೆಯನ್ನು ಕಟ್ಟಿಹಾಕುತ್ತಾನೆ.

XIII. ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರ ಬರೆಯುವುದು(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :

1 X 4 = 4 (2+2)

43. ನಿರ್ಜನವಾಗಿ ಭಣಗಟ್ಟುವ ಹಾಳು ಮಂಟಪಗಳು, ಭಗ್ನವಾದ ವಿಗ್ರಹ ರಾಶಿಗಳು, ಸುಮಾರು ೩೦೦ ವರ್ಷಗಳು ವಿಶ್ವವಿಖ್ಯಾತವಾಗಿ ಬಾಳಿ ಬದುಕಿದ ವಿಜಯನಗರ ಸಾಮ್ರಾಜ್ಯವಿಂದು ಕೇವಲ ಮಸಣ. ೧೫೬೫ರ ತಾಳಿಕೋಟೆ ಯುದ್ಧದಲ್ಲಿ ರಾಜ್ಯಲಕ್ಷ್ಮಿ ಮರೆಯಾಯಿತು. ವಿಜಯನಗರಕ್ಕೆ ಈ ವೈದವ್ಯ ಬಂದು ಐವತ್ತು ವರ್ಷಗಳಾಯಿತು ಎಂದುಕೊಂಡನು ಎಚ್ಚಮ್ಮನಾಯಕ. ಇವನೀಗ ಪಂಪಾಕ್ಷೇತ್ರದ ದರ್ಶನಕ್ಕಾಗಿ ಬಂದು ಹಾಳು ನಗರದ ನಡುವೆ ಹುಚ್ಚನಂತೆ ತಿರುಗಾಡುತ್ತಿದ್ದನು. ತಾಳಿಕೋಟೆಯ ದುರಂತ ಮುಗಿದ ನಂತರ ಶತ್ರುಗಳು ರಾಜಧಾನಿಯ ಕಡೆಗೆ ನುಗ್ಗಿದರು ತಿರುಮಲ ರಾಯನು ಅವಸರದಲ್ಲಿ ವಿಜಯನಗರವನ್ನು ಬಿಡಬೇಕಾಯಿತು. ಮುಸಲ್ಮಾನರ ಕೈಗೆ ಸಿಕ್ಕದಂತೆ ಎಲ್ಲಾ ಸಂಪತ್ತನ್ನು ಸಾಗಿಸಲಾಗಲಿಲ್ಲ. ಕೇವಲ ೧೫೫೦ ಆನೆಗಳ ಮೇಲೆ ಹೇರಬಹುದಾದಷ್ಟು ಸಂಪತ್ತನ್ನು ಮಾತ್ರ ಪೆನುಗೊಂಡೆಗೆ ಸಾಗಿಸಿದ್ದನು. ವಿಜಯನಗರದಲ್ಲಿ ಇನ್ನೆಷ್ಟು ಐಶ್ವರ್ಯ ಇದ್ದಿರಬಹುದು ಎಂದು ತರುಣ ವೀರ ಎಚ್ಚಮ್ಮ ನಾಯಕ ಕಲ್ಲು ಬಂಡೆಯ ಮೇಲೆ ಕುಳಿತು ಯೋಚಿಸುತ್ತ ನಿಟ್ಟುಸಿರು ಬಿಟ್ಟನು. ಎಚ್ಚಮನ ತಂದೆ ಪ್ರತಾಪದುರ್ಗದ ಮಂಡಲಾಧಿಪತಿ ಆಗಿದ್ದನು. ಅರಸನ ಬಲಗೈ ಬಂಟ ಸ್ವಾಮಿನಿಷ್ಠ ಎನಿಸಿಕೊಂಡಿದ್ದನು. ತನ್ನ ಮಗನು ನನ್ನಂತೆ ಆಗಬೇಕೆಂದು ಬಯಸಿ, ಸಾಯುವ ಮುನ್ನ ಎಚ್ಚಮ್ಮನನ್ನು ಕರೆದು, "ಮಗನೆ, ವಿಜಯನಗರ ರಾಜಧಾನಿಗೆ ಹೋಗಿ ಪಂಪಾಧೀಶ, ವಿರೂಪಾಕ್ಷನ ದರ್ಶನ ಮಾಡಿ ಬಾ. ಇದರಿಂದ ನಿನ್ನ ತಿಳಿವಳಿಕೆ ಹೆಚ್ಚುತ್ತದೆ. ನಿನ್ನ ಜೀವನಕ್ಕೆ ಪ್ರೇರಣೆ ಸಿಗುತ್ತದೆ. ಅಷ್ಟು ದೊಡ್ಡ ಸಾಮ್ರಾಜ್ಯವನ್ನು ಆಳಿ ಈಗ ಈ ಹೀನ ಸ್ಥಿತಿಗೆ ಬಂದಿರುವ ರಾಜವಂಶದ ಬಗ್ಗೆ ನಿನ್ನ ನಿಷ್ಠೆ ಹೆಚ್ಚಾಗಿ ಅದರ ಉಳಿವಿಗಾಗಿ ನಿನ್ನ ಬಾಳನ್ನು ಮೀಸಲಿಡಬೇಕೆನಿಸುತ್ತದೆ. ಇದರಿಂದ ಹಿಂದಿನ ವೈಭವದ ದಿನಗಳು ಮರುಕಳಿಸಬಹುದು" ಎಂದನು. ಎಚ್ಚಮನಾಯಕ ಹಾಳು ಹಂಪೆಯಲ್ಲಿ ದಿನವೆಲ್ಲ ತಿರುಗಿದನು. ವಿಜಯನಗರದ ವೈಭವವನ್ನು ನುಚ್ಚುನೂರು ಮಾಡಿದ ಮಾನವ ಮೃಗಗಳನ್ನು ನೆನೆದು ಹೃದಯ ಕುದಿಯಿತು. ವಿರೂಪಾಕ್ಷನ ದರ್ಶನ ಪಡೆದು ಕುದುರೆ ಹತ್ತಿ ಪ್ರತಾಪದುರ್ಗಕ್ಕೆ ಬಂದನು.

ಪ್ರಶ್ನೆಗಳು :

ಅ. ಎಚ್ಚಮ್ಮನಾಯಕನಿಗೆ ತಂದೆ ಹೇಳಿದ ಮಾತುಗಳನ್ನು ತಿಳಿಸಿ

ಆ. ಕಲ್ಲು ಬಂಡೆಯ ಮೇಲೆ ಕುಳಿತ ಎಚ್ಚಮ್ಮನಾಯಕ ನಿಟ್ಟುಸಿರು ಬಿಡಲು ಕಾರಣವೇನು?

ಉತ್ತರ :

ಅ. ಎಚ್ಚಮನ ತಂದೆ ಸಾಯುವ ಮುನ್ನ ತನ್ನ ಮಗನನ್ನು ಕರೆದು, ವಿಜಯನಗರ ರಾಜಧಾನಿಗೆ ಹೋಗಿ ಪಂಪಾದೀಶ, ವಿರೂಪಾಕ್ಷನ ದರ್ಶನ ಮಾಡಿ ಬಾ. ಇದರಿಂದ ನಿನ್ನ ತಿಳಿವಳಿಕೆ ಹೆಚ್ಚುತ್ತದೆ. ನಿನ್ನ ಜೀವನಕ್ಕೆ ಪ್ರೇರಣೆ ಸಿಗುತ್ತದೆ. ಅಷ್ಟು ದೊಡ್ಡ ಸಾಮ್ರಾಜ್ಯವನ್ನು ಆಳಿ ಈಗ ಹೀನಸ್ಥಿತಿಗೆ ಬಂದಿರುವ ರಾಜ ವಂಶದ ಬಗ್ಗೆ ನಿನ್ನ ನಿಷ್ಠೆ ಹೆಚ್ಚಾಗಿ ಅದರ ಉಳಿವಿಗಾಗಿ ನಿನ್ನ ಬಾಳು ಮೀಸಲಿಡಬೇಕೆನಿಸುತ್ತದೆ. ಇದರಿಂದ ಹಿಂದಿನ ವೈಭವಗಳು ಮರಳಿ ಬರಬಹುದು ಎಂದನು.

ಆ. ತಾಳಿಕೋಟೆಯ ದುರಂತ ಮುಗಿದ ನಂತರ ಶತ್ರುಗಳು ರಾಜಧಾನಿಯ ಕಡೆಗೆ ನುಗ್ಗಿದರು. ತಿರುಮಲ ರಾಯನು ಅವಸರದಲ್ಲಿ ವಿಜಯನಗರವನ್ನು ಬಿಡಬೇಕಾಯಿತು ಮುಸಲ್ಮಾನರ ಕೈಗೆ ಸಿಕ್ಕದಂತೆ ಎಲ್ಲಾ ಸಂಪತ್ತನ್ನು ಸಾಗಿಸಲಾಗಲಿಲ್ಲ. ೧೫೫೦ ಆನೆಗಳ ಮೇಲೆ ಹೇರಬಹುದಾಷ್ಟು ಸಂಪತ್ತನ್ನು ಮಾತ್ರ ಪೆನುಗೊಂಡೆಗೆ ಸಾಗಿಸಿದ್ದನು. ವಿಜಯನಗರದಲ್ಲಿ ಇನ್ನೆಷ್ಟು ಐಶ್ವರ್ಯ ಇದ್ದಿರಬಹುದು ಎಂದು ಕಲ್ಲು ಬಂಡೆಯ ಮೇಲೆ ಕುಳಿತ ಎಚ್ಚಮನು ನಿಟ್ಟುಸಿರು ಬಿಟ್ಟನು.

XIV. ಪತ್ರಲೇಖನ ಬರೆಯುವುದು : **1 X 5 = 5**

44. ನಿಮ್ಮನ್ನು ಮಂಗಳೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಹರ್ಷಿತಾ' ಎಂದು ಭಾವಿಸಿಕೊಂಡು, ಶಾಲಾ ವೇಳೆಗೆ ತಲುಪಲು ಅನುಕೂಲವಾಗುವಂತೆ ಬಸ್ಸಿನ ಸೌಕರ್ಯವನ್ನು ಮಾಡಿಕೊಡುವಂತೆ ಕೋರಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಚಿಕ್ಕಮಗಳೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಪ್ರದೀಪ' ಎಂದು ಭಾವಿಸಿಕೊಂಡು, ನಿಮ್ಮ ಶೈಕ್ಷಣಿಕ ಪ್ರಗತಿಯನ್ನು ವಿವರಿಸಿ ಹುಬ್ಬಳ್ಳಿಯ ಗೋಕುಲ ಬಡಾವಣೆಯಲ್ಲಿ ವಾಸವಾಗಿರುವ 'ಚಂದ್ರಶೇಖರ' ಎಂಬ ಹೆಸರಿನ ತಂದೆಗೆ ಪತ್ರವನ್ನು ಬರೆಯಿರಿ.

ಉತ್ತರ :

ಸ್ಥಳ : ಶಿಕಾರಿಪುರ
ದಿನಾಂಕ : ೨೩. ೦೬. ೨೦೨೬

ಇವರಿಂದ,
ಹರ್ಷಿತಾ
ಸರ್ಕಾರಿ ಪ್ರೌಢಶಾಲೆ
ಮಂಗಳೂರು

ಇವರಿಗೆ,
ಮಾನ್ಯ ವ್ಯವಸ್ಥಾಪಕರು
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ
ಮಂಗಳೂರು

ಮಾನ್ಯರೆ,

ವಿಷಯ : <u>ಶಾಲಾ ವೇಳೆಗೆ ತಲುಪಲು ಅನುಕೂಲವಾಗುವಂತೆ ಬಸ್ಸಿನ ಸೌಕರ್ಯವನ್ನು ಮಾಡಿಕೊಡುವಂತೆ ಕೋರಿ,</u>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಂಗಳೂರು ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಹರ್ಷಿತಾ ಎಂಬ ಹೆಸರಿನವಳಾದ ನಾನು ತಮ್ಮಲ್ಲಿ ವಿನಂತಿಸುವುದೇನೆಂದರೆ, ನಾನು ಪ್ರತಿನಿತ್ಯ ಶಾಲೆಗೆ ಗ್ರಾಮೀಣ ಭಾಗದಿಂದ ಬರುತ್ತಿದ್ದೇನೆ. ಶಾಲಾ ವೇಳೆಗೆ ತಲುಪಲು ಅನುಕೂಲವಾಗುವಂತೆ ಬಸ್ಸಿನ ವ್ಯವಸ್ಥೆ ಇಲ್ಲದೆ ಇರುವುದರಿಂದ ಪ್ರತಿನಿತ್ಯ ತಡವಾಗಿ ಶಾಲೆಯನ್ನು ತಲುಪುತ್ತಿದ್ದೇನೆ. ಹತ್ತನೇ ತರಗತಿಯ ವಿದ್ಯಾರ್ಥಿನಿಯಾಗಿರುವುದರಿಂದ ಪ್ರತಿದಿನ ವಿಶೇಷ ತರಗತಿಯೂ ನಡೆಯುತ್ತಿದೆ. ಇದರಿಂದ ನನ್ನ ಓದಿಗೆ ತುಂಬಾ ತೊಂದರೆಯಾಗಿದೆ. ನನ್ನಂತೆ ಮಂಗಳೂರು ನಗರದ ಸುತ್ತಲಿನ ಗ್ರಾಮದ ಅನೇಕ ವಿದ್ಯಾರ್ಥಿಗಳು ಪ್ರತಿನಿತ್ಯ ಇದೇ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ತಾವು ದಯಮಾಡಿ ಶಾಲಾವೇಳೆಗೆ ತಲುಪಲು ಅನುಕೂಲವಾಗುವಂತೆ ಬಸ್ಸಿನ ಸೌಕರ್ಯವನ್ನು ಮಾಡಿ ಕೊಡಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತಿದ್ದೇನೆ. ನನ್ನ ಈ ಮನವಿಯನ್ನು ಸ್ವೀಕರಿಸಿ ಅತಿ ಶೀಘ್ರವಾಗಿ ಈಡೇರಿಸುವಿರೆಂದು ಭಾವಿಸುತ್ತೇನೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ
ಹರ್ಷಿತಾ
(ಬಡಾವಣೆಯ ಪ್ರಮುಖರ ಸಹಿಗಳಿವೆ)

ಹೊರ ವಿಳಾಸ :

ಇವರಿಗೆ, ಮಾನ್ಯ ವ್ಯವಸ್ಥಾಪಕರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮಂಗಳೂರು	ಇವರಿಂದ, ಹರ್ಷಿತಾ ಸರ್ಕಾರಿ ಪ್ರೌಢಶಾಲೆ ಮಂಗಳೂರು

ಉತ್ತರ : ಕ್ಷೇಮ ಶ್ರೀ

ಇವರಿಂದ,
ಪ್ರದೀಪ
೧೦ ನೆಯ ತರಗತಿ
ಸರ್ಕಾರಿ ಪ್ರೌಢಶಾಲೆ
ಚಿಕ್ಕಮಗಳೂರು
ದಿನಾಂಕ : ೧೨.೧೨.೨೦೨೬

ತೀರ್ಥರೂಪರವರಿಗೆ,

ನಿಮ್ಮ ಮಗನಾದ ಪ್ರದೀಪ ಮಾಡುವ ನಮಸ್ಕಾರಗಳು. ನಾನು ಇಲ್ಲಿ ಕ್ಷೇಮವಾಗಿದ್ದೇನೆ. ನೀವು ಅಲ್ಲಿ ಕ್ಷೇಮವಾಗಿರುವಿರೆಂದು ನಂಬಿರುತ್ತೇನೆ.

ನನ್ನ ವಿದ್ಯಾಭ್ಯಾಸ ಇಲ್ಲಿ ಚೆನ್ನಾಗಿ ನಡೆಯುತ್ತಿದೆ. ನಿಮ್ಮ ಆಸೆಯಂತೆ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಲು ವೇಳಾಪಟ್ಟಿ ತಯಾರಿಸಿಕೊಂಡು ಓದುತ್ತಿದ್ದೇನೆ. ಈ ಪತ್ರ ಬರೆದ ಕಾರಣವೇನೆಂದರೆ ಈಗಾಗಲೇ ನಡೆಸಿದ ಪ್ರತಿ ಘಟಕ ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಿರುತ್ತೇನೆ. ಶಾಲೆಯಲ್ಲಿ ಎಲ್ಲ ವಿಷಯಗಳ ಪಾಠಗಳು ಮುಕ್ತಾಯಗೊಂಡಿದ್ದು, ಶಿಕ್ಷಕರು ಮುಂಜಾನೆ ಮತ್ತು ಸಂಜೆ ಒಂದು ಗಂಟೆ ಹೆಚ್ಚುವರಿಯಾಗಿ ವಿಶೇಷ ತರಗತಿಗಳನ್ನು ತೆಗೆದುಕೊಂಡು ನಮ್ಮನ್ನು ಮಾರ್ಚ್ ಮತ್ತು ಏಪ್ರಿಲ್ ತಿಂಗಳಿನಲ್ಲಿ ನಡೆಯುವ ವಾರ್ಷಿಕ ಪರೀಕ್ಷೆಗಾಗಿ ಸಜ್ಜುಗೊಳಿಸುತ್ತಿದ್ದಾರೆ. ನಮಗೆ ಅರ್ಥವಾಗದ ಪಾಠಗಳ ಮರುಬೋಧನೆ ಮಾಡುತ್ತ ಮತ್ತು ಕ್ಲಿಷ್ಟಕರ ಪ್ರಶ್ನೆಗಳಿಗೆ ಉತ್ತರಿಸುತ್ತ ನಮ್ಮ ಸಿದ್ಧತೆ ಹೇಗಿರಬೇಕೆಂಬುದನ್ನು ಶಿಕ್ಷಕರು ಮನವರಿಕೆ ಮಾಡಿದ್ದಾರೆ. ನಾನು ಅವರ ಮಾರ್ಗದರ್ಶನದಲ್ಲಿ ಹೆಚ್ಚಿನ ಮುತುವರ್ಜಿವಹಿಸಿ ಅಭ್ಯಾಸ ಮಾಡುತ್ತಿದ್ದು ನಿಮ್ಮ ಆಸೆಯಂತೆ ಖಂಡಿತವಾಗಿಯೂ ವಾರ್ಷಿಕ ಪರೀಕ್ಷೆಯಲ್ಲಿ ೬೨೫ಕ್ಕೆ ೬೨೫ ಅಂಕಗಳನ್ನು ಗಳಿಸುವ ಗುರಿ ಹೊಂದಿದ್ದೇನೆ.

ಮನೆಯಲ್ಲಿ ತಾಯಿಯವರಿಗೂ ನನ್ನ ನಮಸ್ಕಾರಗಳನ್ನು ತಿಳಿಸಿ.

ಇಂತಿ ನಿಮ್ಮ ಪ್ರೀತಿಯ ಮಗ
ಪ್ರದೀಪ

ಹೊರವಿಳಾಸ :

ಇವರಿಗೆ,	ಇವರಿಂದ,
ಚಂದ್ರಶೇಖರ	೧೦ ನೆಯ ತರಗತಿ
ಗೋಕುಲ ಬಡಾವಣೆ	ಸರ್ಕಾರಿ ಪ್ರೌಢಶಾಲೆ
ಹುಬ್ಬಳ್ಳಿ	ಚಿಕ್ಕಮಗಳೂರು

XV. ಪ್ರಬಂಧ ಬರೆವಣಿಗೆ : **1 X 5 = 5**

45. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ.

ಅಥವಾ

ಕೌಶಲ್ಯ ಆಧಾರಿತ ಶಿಕ್ಷಣದ ಮಹತ್ತ್ವ.

ಉತ್ತರ : ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ :

ಪೀಠಿಕೆ : 'ಇತಿಹಾಸ ಅರಿಯದವ ಇತಿಹಾಸ ಸೃಷ್ಟಿಸಲಾರ' ಎಂಬ ಮಾತಿನಂತೆ ಇತಿಹಾಸದ ಸಾಕ್ಷಿಗೆ ಪ್ರಮುಖ ಕೊಂಡಿಗಳೆಂದರೆ ಪ್ರಾಚ್ಯ ವಸ್ತು ಸ್ಮಾರಕಗಳು. ಪ್ರಾಚ್ಯವೆಂದರೆ ಪ್ರಾಚೀನ. ಈ ಪ್ರಾಚೀನ ಇತಿಹಾಸದ ಅಪರೂಪದ ಸ್ಮರಿಸಬಹುದಾದ ಅವಶೇಷಗಳೇ ಸ್ಮಾರಕಗಳು. ಪ್ರಾಚ್ಯ ವಸ್ತು ಸ್ಮಾರಕ ಸಂರಕ್ಷಣೆಯಿಂದ ದೇಶದ ಇತಿಹಾಸ, ಸಂಸ್ಕೃತಿ, ಕಲೆ, ಸಾಮಾಜಿಕ, ರಾಜಕೀಯ, ಆರ್ಥಿಕ ಹೀಗೆ ವಿವಿಧ ಕ್ಷೇತ್ರಗಳ ಬಗೆಗೆ ತಿಳಿಯಲು ಸಹಕಾರಿಯಾಗುತ್ತದೆ. ದೇಶದ ಸಂಸ್ಕೃತಿಯ ಗತಕಾಲದ ವೈಭವವನ್ನು ಅಳೆಯುವ ಮಾನದಂಡಗಳೆಂದರೆ ಈ ಸ್ಮಾರಕಗಳು.

ವಿಷಯ ನಿರೂಪಣೆ : ಪ್ರಾಚ್ಯ ಸ್ಮಾರಕಗಳೆಂದರೆ ದೇವಾಲಯ–ಮಸೀದಿ–ಚರ್ಚು–ಬಸದಿಗಳು, ಕಟ್ಟಡಗಳು, ಪ್ರಾಚೀನ ಪಟ್ಟಣಗಳು, ಅರಮನೆಗಳು, ಮೂರ್ತಿಗಳು, ಶಾಸನಗಳು, ನಾಣ್ಯ ಇತರ ವಸ್ತುಗಳು, ತಾಳೆಗರಿ ಗ್ರಂಥಗಳು ಮುಂತಾದವು. ವಿಶ್ವದಲ್ಲಿ ಏಳು

ಪ್ರಾಚೀನ ಮತ್ತು ಏಳು ಆಧುನಿಕ ಅದ್ಭುತಗಳಿವೆ. ಇವುಗಳಲ್ಲಿ ಭಾರತದ ತಾಜ್‌ಮಹಲ್ ಒಂದಾಗಿದೆ. ಭಾರತದಲ್ಲಿ ತಾಜ್‌ಮಹಲ್, ಕೆಂಪುಕೋಟೆ, ಸೂರ್ಯದೇವಾಲಯ, ಚಾರ್‌ಮಿನಾರ್, ಅಜಂತಾ, ಎಲ್ಲೋರಾ ಗುಹೆಗಳು, ಬಾದಾಮಿ ಗುಹೆ, ಆಗ್ರಾಕೋಟೆ, ಗೋಲ್ ಗುಂಬಜ್, ಹಂಪಿ, ಬೇಲೂರು, ಮೈಸೂರು ಅರಮನೆ, ಗೋಮ್ಮಟೇಶ್ವರ ವಿಗ್ರಹ ಹೀಗೆ ಅಸಂಖ್ಯಾತ ಸ್ಮಾರಕಗಳು ದೇಶದ ಹೆಮ್ಮೆಯ ಪ್ರತೀಕವಾಗಿವೆ. ಇವುಗಳಿಂದ ಪ್ರವಾಸೋದ್ಯಮ ಹೆಚ್ಚುತ್ತದೆ. ಭಾರತದ ಸ್ಮಾರಕಗಳು ವಿದೇಶಿ ದಾಳಿ ಹಾಗೂ ಸ್ವದೇಶಿ ಅತಿಕ್ರಮಣಕ್ಕೆ ಒಳಗಾಗಿ ತಮ್ಮ ಸೌಂದರ್ಯ ಕಳೆದುಕೊಂಡು ಅವಶೇಷಗಳಾಗಿ ಉಳಿದಿವೆ, ಹಾಳು ಹಂಪೆ ಇದಕ್ಕೆ ಸಾಕ್ಷಿ. ಈಗ ವ್ಯತಿರಿಕ್ತ ಪರಿಸರ ಮತ್ತು ವಿಕೃತ ಕಿಡಿಗೇಡಿಗಳಿಂದ ಸ್ಮಾರಕ ರಕ್ಷಣೆಯಾಗಬೇಕಿದೆ. ಪ್ರಾಚ್ಯ ಸ್ಮಾರಕಗಳ ರಕ್ಷಣೆಗೆ ಇಲಾಖೆಯನ್ನು ಸರ್ಕಾರ ಸ್ಥಾಪಿಸಿದೆ. ಈ ಇಲಾಖೆಯು ಹಲವಾರು ಯೋಜನೆಗಳನ್ನು ಜಾರಿಗೊಳಿಸಿದೆ. ಸುಮಾರು 4000 ಸ್ಥಳಗಳು ಈ ಇಲಾಖೆಯ ವ್ಯಾಪ್ತಿಗೆ ಬರುತ್ತವೆ. ಉಳಿದ ಕ್ಷೇತ್ರಗಳನ್ನೂ ಸೇರಿಸಬೇಕಿದೆ. ಪ್ರವಾಸಿಗರು ಸ್ಮಾರಕಗಳ ಅಂದ ಹಾಳು ಮಾಡದೆ ವೀಕ್ಷಿಸಬೇಕು. ಪ್ರವಾಸಿ ತಾಣಗಳ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಸ್ಥಳೀಯ ಸ್ವಯಂಸೇವಕರನ್ನು ಬಳಸಿಕೊಳ್ಳಬೇಕು. ವಿದ್ಯಾರ್ಥಿ ಮತ್ತು ಯುವ ಜನಾಂಗದವರಲ್ಲಿ ಹೆಚ್ಚಿನ ಅರಿವು ಮೂಡಿಸಬೇಕು. ಹವ್ಯಾಸಿ ಪ್ರಾಚ್ಯ ವಸ್ತು ಸಂಗ್ರಹಕಾರರನ್ನು ಪ್ರೋತ್ಸಾಹಿಸಬೇಕು. ಸಂಘ ಸಂಸ್ಥೆಗಳು ಮಾಧ್ಯಮಗಳು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಸ್ಮಾರಕ ಸಂರಕ್ಷಣೆಯ ಕುರಿತು ಶಾಲಾ–ಕಾಲೇಜುಗಳಲ್ಲಿ ಕಾರ್ಯಕ್ರಮವಾಗಬೇಕು. ರಾಸಾಯನಿಕ ಮಾಲಿನ್ಯ, ವಾಯು ಮಾಲಿನ್ಯ, ಶಬ್ದ ಮಾಲಿನ್ಯಗಳಿಂದ ರಕ್ಷಣೆ ನೀಡಬೇಕು. ಪರಿಸರ ಮಾಲಿನ್ಯದಿಂದಾಗಿ ಸ್ಮಾರಕಗಳು ತಮ್ಮ ಸೌಂದರ್ಯ ಮತ್ತು ಅಸ್ತಿತ್ವ ಕಳೆದುಕೊಳ್ಳುತ್ತಿವೆ. ಕಾರ್ಖಾನೆಗಳ ರಾಸಾಯನಿಕ ಪ್ರಭಾವದಿಂದ ಸ್ಮಾರಕಗಳು ಕಳಾಹೀನವಾಗುತ್ತಿವೆ. ತಾಜ್‌ಮಹಲಿನಂತಹ ಸ್ಮಾರಕ ಕಳೆಗುಂದುತ್ತಿದೆ. ಏಳು ಬಾರಿ ಪ್ರತಿಧ್ವನಿಸುವ ಗೋಲ್‌ಗುಂಬಜ್ ನಾಲ್ಕೈದು ಬಾರಿ ಕುಸಿದಿದೆಯಂತೆ. ಇವುಗಳ ಬಗೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕು.

ಉಪಸಂಹಾರ : ಸ್ಮಾರಕಗಳು ದೇಶದ ಇತಿಹಾಸ ಸಂಸ್ಕೃತಿಯ ಪ್ರತೀಕಗಳು. ಇವುಗಳ ಸಂರಕ್ಷಣೆ ಸರ್ಕಾರದ ಹೊಣೆ ಮಾತ್ರವಲ್ಲ ಪ್ರಜೆಗಳ ಕರ್ತವ್ಯವಾಗಿದೆ. ಮುಂದುವರೆದ ದೇಶಗಳಿಗೆ ಹೋಲಿಸಿದರೆ ಪ್ರಾಚ್ಯ ಸ್ಮಾರಕ ರಕ್ಷಣೆಯಲ್ಲಿ ನಾವು ಹಿಂದೆ ಇದ್ದೇವೆ. ದೇಶದ ಆಸ್ತಿಯಾದ ಸ್ಮಾರಕಗಳನ್ನು ಒಟ್ಟಾಗಿ ಕಾಪಾಡಿಕೊಂಡು ಹೋಗೋಣವೆಂದು ಆಶಿಸುತ್ತೇನೆ.

ಅಥವಾ

ಉತ್ತರ : ಕೌಶಲ್ಯ ಆಧಾರಿತ ಶಿಕ್ಷಣದ ಮಹತ್ತ್ವ :

ಪೀಠಿಕೆ : ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೇವಲ ಅಂಕಗಳು ಮತ್ತು ಪದವಿ ಪ್ರಮಾಣಪತ್ರಗಳು ಯಶಸ್ಸನ್ನು ಖಾತರಿಪಡಿಸುವುದಿಲ್ಲ. ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯು ವಿದ್ಯಾರ್ಥಿಗಳಿಗೆ ಸೈದ್ಧಾಂತಿಕ ಜ್ಞಾನವನ್ನು ನೀಡಿದರೆ, ಕೌಶಲ್ಯ ಆಧಾರಿತ ಶಿಕ್ಷಣವು (Skill-based education) ಆ ಜ್ಞಾನವನ್ನು ಪ್ರಾಯೋಗಿಕವಾಗಿ ಹೇಗೆ ಬಳಸಬೇಕೆಂದು ಕಲಿಸುತ್ತದೆ. ಕೌಶಲ್ಯ ಆಧಾರಿತ ಶಿಕ್ಷಣ ಎಂದರೆ ಕೇವಲ ಪುಸ್ತಕದ ಓದಿಗೆ ಸೀಮಿತವಾಗದೆ, ವ್ಯಕ್ತಿಯಲ್ಲಿರುವ ನೈಜ ಸಾಮರ್ಥ್ಯ, ತಾಂತ್ರಿಕ ನೈಪುಣ್ಯತೆ ಮತ್ತು ವೃತ್ತಿಪರ ಕೌಶಲ್ಯಗಳನ್ನು ಗುರುತಿಸಿ ಬೆಳೆಸುವ ಆಧುನಿಕ ಶಿಕ್ಷಣ ಪದ್ಧತಿಯಾಗಿದೆ. ಇದು ವಿದ್ಯಾರ್ಥಿಗಳನ್ನು ಕೇವಲ ಪರೀಕ್ಷೆಗೆ ಸಿದ್ಧಪಡಿಸದೆ, ಬದುಕಿನ ಸವಾಲುಗಳಿಗೆ ಸಿದ್ಧಪಡಿಸುತ್ತದೆ.

ವಿಷಯ ನಿರೂಪಣೆ :

ಉದ್ಯೋಗಾವಕಾಶಗಳ ಸೃಷ್ಟಿ ಮತ್ತು ಉದ್ಯಮಶೀಲತೆ : ಪ್ರಸ್ತುತ ದಿನಗಳಲ್ಲಿ ಪದವಿ ಮುಗಿಸಿದ ಲಕ್ಷಾಂತರ ಯುವಕರು ಉದ್ಯೋಗವಿಲ್ಲದೆ ಪರದಾಡುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಉದ್ಯೋಗ ಮಾರುಕಟ್ಟೆಗೆ ಬೇಕಾದ ಪ್ರಾಯೋಗಿಕ ಜ್ಞಾನ ಅವರಲ್ಲಿ ಇಲ್ಲದಿರುವುದು. ಕೌಶಲ್ಯ ಆಧಾರಿತ ಶಿಕ್ಷಣವು ಈ ಕೊರತೆಯನ್ನು ನೀಗಿಸುತ್ತದೆ. ಇದು ಕಂಪ್ಯೂಟರ್ ಕೋಡಿಂಗ್, ಗ್ರಾಫಿಕ್ ಡಿಸೈನಿಂಗ್, ಅಕೌಂಟಿಂಗ್, ಮೆಕ್ಯಾನಿಕಲ್ ಕೆಲಸಗಳಂತಹ ಕಠಿಣ ಕೌಶಲ್ಯಗಳನ್ನು ಕಲಿಸುವುದರಿಂದ ವಿದ್ಯಾರ್ಥಿಗಳಿಗೆ ಸುಲಭವಾಗಿ ಕೆಲಸ ಸಿಗುತ್ತದೆ. ಅಷ್ಟೇ ಅಲ್ಲದೆ, ಇದು ಯುವಕರಲ್ಲಿ ಸ್ವಯಂ ಉದ್ಯೋಗದ ಆಸಕ್ತಿಯನ್ನು ಮೂಡಿಸುತ್ತದೆ. ಸ್ವಂತ ಉದ್ಯಮ ಅಥವಾ ಸ್ಟಾರ್ಟ್‌ಅಪ್‌ಗಳನ್ನು ಪ್ರಾರಂಭಿಸಲು ಅಗತ್ಯವಿರುವ ಧೈರ್ಯ ಮತ್ತು ನಾಯಕತ್ವದ ಗುಣಗಳನ್ನು ಇದು ಬೆಳೆಸುತ್ತದೆ. ಇದರಿಂದ ಅಭ್ಯರ್ಥಿಗಳು ಕೆಲಸ ಹುಡುಕುವವರಾಗುವ ಬದಲಿಗೆ, ಕೆಲಸ ನೀಡುವ ಉದ್ಯಮಿಗಳಾಗುತ್ತಾರೆ.

ಮೃದು ಕೌಶಲ್ಯಗಳ ಮಹತ್ತ್ವ : ಕೌಶಲ್ಯ ಶಿಕ್ಷಣವು ಕೇವಲ ತಾಂತ್ರಿಕ ಜ್ಞಾನಕ್ಕೆ ಸೀಮಿತವಾಗಿಲ್ಲ. ಇದು ವ್ಯಕ್ತಿತ್ವ ವಿಕಸನಕ್ಕೆ ಬೇಕಾದ ಮೃದು ಕೌಶಲ್ಯಗಳನ್ನು ಸಹ ಒಳಗೊಂಡಿದೆ. ಉತ್ತಮ ಸಂವಹನ ಕಲೆ, ಸಮಯ ನಿರ್ವಹಣೆ, ತಂಡದಲ್ಲಿ ಕೆಲಸ ಮಾಡುವ ಗುಣ ಮತ್ತು ಒತ್ತಡ ನಿರ್ವಹಣೆಯನ್ನು ಇದು ಕಲಿಸುತ್ತದೆ. ಉದ್ಯೋಗ ಕ್ಷೇತ್ರದಲ್ಲಿ ಯಶಸ್ವಿಯಾಗಲು ಮತ್ತು ಉತ್ತಮ ಮಾನವ ಸಂಬಂಧಗಳನ್ನು ಹೊಂದಲು ಈ ಮೃದು ಕೌಶಲ್ಯಗಳು ಅತ್ಯಂತ ಅವಶ್ಯಕವಾಗಿವೆ.

ವ್ಯಕ್ತಿತ್ವ ವಿಕಸನ ಮತ್ತು ವಿಮರ್ಶಾತ್ಮಕ ಚಿಂತನೆ : ಸಾಂಪ್ರದಾಯಿಕ ಶಿಕ್ಷಣದಲ್ಲಿ ಕಂಠಪಾಠ ಮಾಡುವ ಪದ್ಧತಿ ಹೆಚ್ಚಾಗಿರುತ್ತದೆ. ಆದರೆ ಕೌಶಲ್ಯ ಶಿಕ್ಷಣವು ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಚಿಂತನೆ ಮತ್ತು ಸ್ವತಂತ್ರವಾಗಿ ಯೋಚಿಸುವ ಶಕ್ತಿಯನ್ನು ಹೆಚ್ಚಿಸುತ್ತದೆ. ಯಾವುದೇ ಒಂದು ಸಮಸ್ಯೆಯನ್ನು ಎದುರಿಸಿದಾಗ ಅದಕ್ಕೆ ಪ್ರಾಯೋಗಿಕ ಪರಿಹಾರ ಕಂಡುಕೊಳ್ಳುವ ಸಾಮರ್ಥ್ಯವನ್ನು ಇದು ನೀಡುತ್ತದೆ. ಇದು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ತುಂಬುತ್ತದೆ ಮತ್ತು ಅವರ ಸೃಜನಶೀಲತೆಯನ್ನು ಹೊರತರುತ್ತದೆ.

ದೇಶದ ಪ್ರಗತಿಯಲ್ಲಿ ಪಾತ್ರ : ಯಾವುದೇ ದೇಶದ ಪ್ರಗತಿಯು ಆ ದೇಶದ ಯುವಶಕ್ತಿಯನ್ನು ಅವಲಂಬಿಸಿರುತ್ತದೆ. ಕೌಶಲ್ಯ ರಹಿತ ಯುವಸಮುದಾಯ ದೇಶಕ್ಕೆ ಹೊರೆಯಾಗಬಹುದು, ಆದರೆ ಕೌಶಲ್ಯ ಭರಿತ ಯುವಶಕ್ತಿ ದೇಶದ ದೊಡ್ಡ ಆಸ್ತಿಯಾಗುತ್ತದೆ. ಭಾರತದಂತಹ ಜನಸಂಖ್ಯೆ ಹೆಚ್ಚಿರುವ ದೇಶದಲ್ಲಿ 'ಕೌಶಲ್ಯ ಭಾರತ'ದಂತಹ ಯೋಜನೆಗಳು ಯುವಕರಿಗೆ ತರಬೇತಿ ನೀಡುತ್ತಿವೆ. ದೇಶದಲ್ಲಿ ಕುಶಲ ಕಾರ್ಮಿಕರ ಸಂಖ್ಯೆ ಹೆಚ್ಚಾದಾಗ ಕೈಗಾರಿಕೆಗಳು, ತಂತ್ರಜ್ಞಾನ ಮತ್ತು ಆರ್ಥಿಕತೆ ವೇಗವಾಗಿ ಬೆಳೆಯುತ್ತವೆ. ಇದು ದೇಶದ ನಿರುದ್ಯೋಗ ಮತ್ತು ಬಡತನ ನಿರ್ಮೂಲನೆಗೆ ನೇರ ಕೊಡುಗೆ ನೀಡುತ್ತದೆ.

ಉಪಸಂಹಾರ : ಕೌಶಲ್ಯ ಆಧಾರಿತ ಶಿಕ್ಷಣವು ಇಂದಿನ ದಿನದಲ್ಲಿ ಅಗತ್ಯವಾಗಿದೆ. ಕೇವಲ ಅಂಕಗಳ ಬೆನ್ನಟ್ಟುವ ಶಿಕ್ಷಣ ಪದ್ಧತಿಯಿಂದ ಹೊರಬಂದು, ಪ್ರತಿಯೊಬ್ಬ ವಿದ್ಯಾರ್ಥಿಗೂ ಅವರ ಆಸಕ್ತಿಗೆ ತಕ್ಕ ಕೌಶಲ್ಯವನ್ನು ನೀಡಬೇಕಾಗಿದೆ. ಪ್ರಾಥಮಿಕ ಶಾಲಾ ಹಂತದಿಂದಲೇ ಪಠ್ಯಕ್ರಮದಲ್ಲಿ ಕೌಶಲ್ಯ ತರಬೇತಿಯನ್ನು ಅಳವಡಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಜ್ಞಾನದ ಜೊತೆಗೆ ಕೌಶಲ್ಯವೂ ಸೇರಿದಾಗ ಮಾತ್ರ ಒಬ್ಬ ವ್ಯಕ್ತಿ ಪರಿಪೂರ್ಣನಾಗಲು ಮತ್ತು ದೇಶದ ಜವಾಬ್ದಾರಿಯುತ ಪ್ರಜೆಯಾಗಲು ಸಾಧ್ಯ.

"ಕಂಠಪಾಠ ಶಿಕ್ಷಣಕ್ಕೆ ನೀಡಿದರೆ ವಿದಾಯ, ಕೌಶಲ್ಯ ಶಿಕ್ಷಣದಿಂದಾಗುವುದು ದೇಶದ ಉದಯ"